ಕರ್ನಾಟಕ ಧನ ವಿನಿಯೋಗ (ನಂ. 3) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1995ರ ಕರ್ನಾಟಕ ಧನ ವಿನಿಯೋಗ (ನಂ. 3) ವಿಧೇಯಕವನ್ನು ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

3) ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ 1995

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಆರ್. ಎಲ್. ಜಾಲಪ್ಪ(ಕಂದಾಯ ಮಂತ್ರಿಗಳು : ಮಾನ್ಯ ಅಧ್ಯಕ್ಷರೆ, 1995ರ ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ತಮ್ಮ ಅನುಮತಿ ಕೋರುತ್ತೇನೆ.

The question was proposed.

+ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಮ್ಮ ರಾಷ್ಟ್ರದಲ್ಲಿ ಈಗ ಆರ್ಥಿಕವಾಗಿ ಬಹಳಷ್ಟು ಬದಲಾವಣೆಯಾಗಿದೆ. ಲಿಬರಲೈಜೇಷನ್ ಎಂದು ಭಾರತ ಸರ್ಕಾರದವರು ತಮ್ಮ ಆರ್ಥ ವ್ಯವಸ್ಥೆಯಲ್ಲಿ ಬದಲಾವಣೆಗಳನ್ನು ಮಾಡಿದಾಗ ಮತ್ತು ಪರರಾಷ್ಟ್ರಗಳಿಂದ ಬಂಡವಾಳ ಹೂಡಿಕೆಗೆ ಅವರು ಪ್ರೋತ್ಸಾಹ ಕೊಟ್ಟಿರುವುದರಿಂದ ಇದರ ಜೊತೆಗೆ ಕರ್ನಾಟಕದಲ್ಲಿ ಇವತ್ತು ಪರರಾಷ್ಟ್ರಗಳಿಂದ ಹಣ ಹೂಡುವುದಕ್ಕೆ ಒಳ್ಳೆಯ ಅವಕಾಶವಿದೆ ಎಂದು ಬಹಳಷ್ಟು ಜನರು ಮುಂದೆ ಬರುತ್ತಿದ್ದಾರೆ. ನಮ್ಮ ನೆರೆಯ ರಾಜ್ಯಗಳಾದ ಕೇರಳ, ಮಹಾರಾಷ್ಟ್ರ, ಆಂಧ್ರಪ್ರದೇಶ, ಮತ್ತು ತಮಿಳುನಾಡುಗಳಲ್ಲಿ ನಾವು ಏನು ಭೂ ಸುಧಾರಣೆ ಕಾಯಿದೆ ಅಡಿಯಲ್ಲಿ ಬಹಳ ಕಟ್ಟುನಿಟ್ಟಾದ ಕಾನೂನನ್ನು ತಂದಿದ್ದೇವೆ. ಅಂಥವುಗಳನ್ನು ಇವತ್ತು ಸಡಿಲಿಸಿದರೆ ಹೊರ ರಾಷ್ಟ್ರಗಳಿಂದ ಬಹಳಷ್ಟು ಹಣವನ್ನು ಹೂಡುವುದಕ್ಕೆ ಸಹಾಯವಾಗುತ್ತದೆ ಎಂದು ಮಾಡಿದ್ದೇವೆ. ನಮ್ಮ ಸರ್ಕಾರವು ಇದನ್ನು ಗಮನಿಸಿ ಕೆಲವೊಂದು ರಂಗಗಳಲ್ಲಿ ಮಾತ್ರ ಈ ಬದಲಾವಣೆಯನ್ನು ತರಬೇಕೆಂದು ಈ ಒಂದು ಬಿಲ್ ತಂದಿದ್ದೇವೆ. ಮೊಟ್ಟ ಮೊದಲನೆಯದಾಗಿ 1974ರಲ್ಲಿ ಕಾನೂನು ಆಗಿತ್ತು. ಆಗ ನಾನು ಶಾಸಕನಲ್ಲಿದ್ದಿದ್ದರೂ ಮಾನ್ಯ ದೇವರಾಜ ಅರಸುವರ ಜೊತೆಯಲ್ಲಿ ಇದ್ದೆ. ಅವರು ಏನು ಬದಲಾವಣೆಯನ್ನು ತಂದಿದ್ದರು. ಅದಕ್ಕೆ ನನ್ನ ಸಹಮತವಿದ್ದು, ಅವರು ಇರುವವರೆಗೂ ಅವರ ಜೊತೆಯಲ್ಲಿ ಇದ್ದೆ. ನನಗೆ ಅದರ ಬಗ್ಗೆ ಕಮಿಟಮೆಂಟ್ ಇದೆ. ಈಗ ವಿಧಿ ಇಲ್ಲದೆ ಕೆಲವು ಭಾಗಗಳಲ್ಲಿ ಮಾತ್ರ ತಿದ್ದುಪಡಿ ಮಾಡಿ, ಆ ಕಾನೂನನ್ನು ಸ್ವಲ್ಪ ಸಡಿಲಿಸಿ ಪರರಾಷ್ಟ್ರಗಳವರು ಇಲ್ಲಿ ಬಂಡವಾಳ ಹೂಡಲು ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ನಾವು ಇದನ್ನು ಮಾಡಿದ್ದೇವೆ.

ಈಗ 1974ರಲ್ಲಿ ಬಂದ ಈ ಆಕ್ಟಿಗೆ ಯಾವುದೇ ಒಂದು ಮಹತ್ತರವಾದ ಬದಲಾವಣೆಗಳು ಇಲ್ಲಿಯವರೆಗೆ ಆಗಿರಲಿಲ್ಲ. 1992ರಲ್ಲಿ ಮಾತ್ರ 109ಕ್ಕೆ ಕೆಲವು ಬದಲಾವಣೆಗಳನ್ನು ತಂದು ಕೈಗಾರಿಕೆಗಳಿಗೆ ಎರಡು ಯೂನಿಟ್ ಮತ್ತು ವಿದ್ಯಾಸಂಸ್ಥೆಗಳಿಗೆ ಒಂದು ಯೂನಿಟ್ ಕೊಂಡುಕೊಳ್ಳಬಹುದು

ಅಂತಹೇಳಿ ಒಂದು ಬದಲಾವಣೆಯನ್ನು ತಂದಿದ್ದೆವು. ಆದರೆ ಈಗ ನಾವು ಏನು ಈ ಬದಲಾವಣೆಗಳೇನು ತಂದಿದ್ದೇವೆ ಅಂದರೆ ಬಹಳ ಮುಖ್ಯವಾಗಿ ವ್ಯವಸಾಯ ಎಂದು ಹೇಳಿದರೆ, ಮೀನುಗಾರಿಕೆಯನ್ನೂ ಕೂಡ ವ್ಯವಸಾಯದಲ್ಲಿ ಸೇರಿಸಿದ್ದೇವೆ. ಮತ್ತು ಈ ಲ್ಯಾಂಡ್ ಟ್ರಿಬ್ಯೂನಲ್ಸನಲ್ಲಿ ಏನು ತೀರ್ಮಾನಗಳನ್ನು ಹಿಂದೆ ತೆಗೆದುಕೊಂಡಿದ್ದೇವೆಯೋ ಅದರ ಅಳತೆಯಲ್ಲಿ ವ್ಯತ್ಯಾಸ ಇದ್ದರೆ ಅದೇ ಲ್ಯಾಂಡ್ ಟ್ರಿಬ್ಯುನಲ್ಸನಲ್ಲಿ ಅದನ್ನು ಸರಿಪಡಿಸಬಹುದು ಎಂದು ಹೇಳಿ ಅದನ್ನು ಇದರಲ್ಲಿ ಸೇರಿಸಿದ್ದೇವೆ. ಎರಡನೆಯದಾಗಿ, ಲ್ಯಾಂಡ್ ಟ್ರಿಬ್ಯುನಲ್ಸನಲ್ಲಿ ಎಕ್ಸೆಸ್ ಲ್ಯಾಂಡ್ಸ ಏನು ಇದೆ, ಫಾರಂ ನಂ. 11ರಲ್ಲಿ ಎಕ್ಸೆಸ್ ಲ್ಯಾಂಡ್ ಬಂದದ್ದನ್ನು ಲ್ಯಾಂಡ್ ಗ್ರಾಂಟ್ ರೂಲ್ಸ ಪ್ರಕಾರ ಹೆಂಚಬೇಕೆಂದು ಹಿಂದೆ ಇತ್ತು. ಆದರೆ ಅದನ್ನು ತೆಗೆದು, ಈ ಲ್ಯಾಂಡ್ ರಿಫಾರ್ಮ ಆಕ್ಟ ಒಳಗಡೆ ಅದನ್ನು ಹಂಚುವುದಕ್ಕೆ ಈಗ ಪ್ರಾವಿಷನನ್ನು ಮಾಡಿಕೊಟ್ಟಿದ್ದೇವೆ. ಇದರ ಜೊತೆಗೆ ಈಗ ಸೆಕ್ಷನ್ 63ಕ್ಕೆ ಬದಲಾವಣೆ ತೆಗೆದುಕೊಂಡು ಬಂದು ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಮೀನುಗಾರಿಕೆಯನ್ನು ಮಾಡುವುದಕ್ಕೆ ರೈತ 20 ವರ್ಷಗಳವರೆಗೂ ಗುತ್ತಿಗೆ ಕೊಡಬಹುದು ಎಂದು ಹೇಳಿ ಒಂದು ಕಾನೂನನ್ನು ತಂದಿದ್ದೇವೆ. ಹಿಂದೆ ಅದು ಇರಲಿಲ್ಲ. ಹಿಂದೆ ಗುತ್ತಿಗೆ ಕೊಟ್ಟಿದ್ದರೆ ಜಮೀನಿನ ಮೇಲಿನ ಅವನ ಹಕ್ಕು ಹೋಗುತ್ತಿತ್ತು. ಈಗ ಅದಕ್ಕೆ ಒಂದು ಕಾನೂನನ್ನು ತಂದಿದ್ದೇವೆ. ಮತ್ತ ಆ ತರಹ ಗುತ್ತಿಗೆದಾರ ಯಾರು ಗುತ್ತಿಗೆ ತೆಗೆದುಕೊಳ್ಳುವವನು ಇನ್ನೂರು ಎಕರೆಗಿಂತ ಹೆಚ್ಚಿಗೆ ಅವನು ಗುತ್ತಿಗೆಗೆ ತೆಗೆದುಕೊಳ್ಳಬಾರದು ಎಂದು ಹೇಳಿ ಒಂದು ಕಾನೂನನ್ನು ತಂದಿದ್ದೇವೆ. ಇನ್ನು ಬಹಳ ಮುಖ್ಯವಾಗಿ ಸೆಕ್ಷನ್ 79ಎ ರ ಅಡಿಯಲ್ಲಿ ವ್ಯವಸಾಯೇತರ ಸಾಲ ಐವತ್ತು ಸಾವಿರ ರೂಪಾಯಿಯನ್ನು ಮೀರಿದ್ದರೆ ಜಮೀನನ್ನು ಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದೇವು. ಈದ ಐವತ್ತು ಸಾವಿರದಿಂದ ಎರಡು ಲಕ್ಷ ರೂಪಾಯಿಗಳವರೆಗೆ ಆ ಮಿತಿಯನ್ನು ನಾವು ಏರಿಸಿದ್ದೇವೆ. ವ್ಯವಸಾಯೇತರ ಆದಾಯ ಎರಡು ಲಕ್ಷ ರೂಪಾಯಿಗಳಿಗಿಂತ ಮಿತಿ ಮೀರಿದ್ದರೆ ಅವನು ಜಮೀನನ್ನು ಕೊಂಡುಕೊಳ್ಳಬಾರದು ಎಂದು ಹೇಳಿ ಇದನ್ನು ನಾವು ತಂದಿದ್ದೇವೆ. ಸೆಕ್ಷನ್ 109ರೊಳಗೆ ಅದರಲ್ಲಿ ನಾವು ಸೆಕ್ಷನ್ 63,79ಎ, 79ಬಿ 80 ಅನ್ನು ಸ್ವಲ್ಪ ಮಟ್ಟಿಗೆ ಸಡಿಲಿಸಿದ್ದೇವೆ. ಇದಕ್ಕಾಗಿ ನಾವು ಕಾನೂನನ್ನು ಬದಲಾವಣೆ ಮಾಡುತ್ತಿದ್ದೇವೆ. ಇವೆಲ್ಲಕ್ಕೂ ರೂಲ್ಸ ಫ್ರೇಂ ಮಾಡುತ್ತಿದ್ದೇವೆ. ಈ ರೂಲ್ಸ ಅಡಿಯಲ್ಲಿ ಈ ಜಮೀನುಗಳನ್ನು ಹಂಚುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೇವೆ. ಕೈಗಾರಿಕೆಗಳಿಗೋಸ್ಕರ ಇಪ್ಪತ್ತು ಯೂನಿಟ್ ಭೂಮಿಯನ್ನು ಅವರು ಕೊಂಡುಕೊಳ್ಳಬಹುದು. ನಾವು ಅದಕ್ಕೋಸ್ಕರ ಈ ಭೂ ಸ್ವಾಧೀನತೆ ಏನು ಮಾಡುತ್ತಿದ್ದೇವೆ, ಈ ಭೂಸ್ವಾಧೀನತೆಯಿಂದ ಬಹಳಷ್ಟು ತೊಂದರೆಗಳಾಗಿದೆ, ಲಂಚ ಚಾಸ್ತಿಯಾಗಿದೆ. ಮತ್ತು ಕೈಗಾರಿಕೆಗಳು ಆಗಲಿ, ಗೃಹನಿರ್ಮಾಣ ಬಗ್ಗೆ ಆಗಲಿ, ಈ ಭೂ ಸ್ವಾಧೀನತೆಯಿಂದ ನಿಧಾನ ಆಗುವುದರ ಜೊತೆಗೆ ರೈತರಿಗೂ ಕೂಡ ಸರಿಯಾಗಿ ಹಣ ಸಿಗುತ್ತಿಲ್ಲ.

ನಾವು ಇದರ ಬಗ್ಗೆ ಕಟ್ಟುನಿಟ್ಟನ್ನು ಜಾಸ್ತಿ ಮಾಡಿದರೂ ಕೂಡ ರೈತರು ಕರಾರು ಮೂಲಕವಾಗಿ, ಜಿ.ಪಿ.ಎ. ಮೂಲಕವಾಗಿ ಜಮೀನನ್ನು ಬೇರೆಯವರಿಗೆ ಕೊಟ್ಟು ಈಗ ಹಣ ಪಡೆಯುವುದರೊಳಗೆ ಬಹಳ ತೊಂದರೆ ಅನುಭವಿಸುತ್ತಿದ್ದಾರೆ. ಆದ್ದರಿಂದ ಇದು ನೇರವಾಗಿರಲಿ, ನ್ಯಾಯಯುತವಾಗಿರಲಿ ಎಂದು ಹೇಳಿ ಈ ಕೆಲವು ಯೋಜನೆಗಳನ್ನು ಮಾಡಿ, ಈ ಕಾನೂನುಗಳನ್ನು ತಂದಿದ್ದೇವೆ. ಇದು ಕೈಗಾರಿಕೆಗಳಿಗೆ ಇಪ್ಪತ್ತು ಯೂನಿಟಗಿಂತ ಮೀರಬಾರದು. ಅವನು ಮಾರ್ಕೆಟನಲ್ಲಿ ಕೊಂಡುಕೊಳ್ಳಬಹುದು. ಅವರು ನಮಗೆ ಮೊದಲೆ ಒಂದು ಪ್ರಾಜೆಕ್ಟರಿಪೋರ್ಟನ್ನು ಕೊಡಬೇಕಾಗುತ್ತದೆ. ಅದನ್ನು ರೂಲ್ಸ ಪ್ರಕಾರ

ನಾವು ಅಪ್ರೂವ್ ಮಾಡಿದ ಮೇಲೆ ಅಲ್ಲಿ ಜಮೀನು ಕೊಂಡುಕೊಂಡು ನಮಗೆ ಕೊಡಬೇಕಾದ ವರ್ಗಾವಣೆ ಶುಲ್ಕವನ್ನೆಲ್ಲಾ ಕೊಟ್ಟು ಅವರು ಕೊಂಡುಕೊಳ್ಳಬಹುದು ಮತ್ತ ಸರ್ಕಾರದಿಂದ ಅಥವಾ ರಿಜಿಸ್ಟ್ಟಾಗಿರುವ ವಿದ್ಯಾಸಂಸ್ಥೆಗಳಿಗೆ ಮೊದಲು ಕೊಂಡುಕೊಳ್ಳುವುದಕ್ಕೆ ಒಂದು ಯೂನಿಟ್ ಅಂತ ಇತ್ತು. ಈಗ ಅದನ್ನು ನಾಲ್ಕು ಯೂನಿಟ್ ಅಂತ ಮಾಡಿದ್ದೇವೆ. ಮತ್ತು ಮೂರನೆಯದಾಗಿ ಸರ್ಕಾರದಿಂದ ಅಥವಾ ರಿಜಿಸ್ಟ್ಟಾಗಿರುವ ಪೂಜಾ ಸಂಸ್ಥೆಗಳು ಏನು ಇದೆ ಅವರು ಒಂದು ಯೂನಿಟನ್ನು ಇವತ್ತು ಕೊಂಡುಕೊಳ್ಳಬಹುದು ಅಂತ ಹೇಳಿ ಒಂದು ಬದಲಾವಣೆಯನ್ನು ನಾವು ತಂದಿದ್ದೇವೆ. ಗೃಹ ನಿರ್ಮಾಣಕ್ಕೆ ಅವರು ಪ್ರಾಜೆಕ್ಟ ರಿಪೋರ್ಟ ಕೊಟ್ಟಮೇಲೆ ಹತ್ತು ಯೂನಿಟಗಳಷ್ಟು ಜಮೀನನ್ನು ಅವರು ಕೊಂಡುಕೊಳ್ಳಬಹುದು. ಈಗಿನ ಹಾಗೆ ಕ್ಲಾಂಡೆಸ್ಟೈನ್ ಬಿಜಿನೆಸ್ ಮಾಡಬೇಕಾದ್ದಿಲ್ಲ. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರಬಹುದು, ಸುಪ್ರೀಂ ಕೋರ್ಟಿನಲ್ಲಿ ಕಳೆದ 4-5 ತಿಂಗಳ ಹಿಂದೆ ಒಂದು ಜಡ್ಜಮೆಂಟ್ ಬಂತು. ಐದು ಸಹಕಾರ ಸಂಘಗಳಲ್ಲಿ ಮಧ್ಯವರ್ತಿಯನ್ನು ಉಪಯೋಗಿಸಿಕೊಂಡು, 4-(1) ಮತ್ತು 6-1 ಮಾಡುವುದಕ್ಕೆ ಅವರನ್ನು ಉಪಯೋಗಿಸಿ ಕೊಂಡಿದ್ದಾರೆ ಅಂಥ. ಅವರು ಸರಿಯಾಗಿ ಹೇಳಿದರು. It is a colourable exercise to get this Section 4 (1) and 6 (1) notified. ಆ ಎಜೆಂಟರ ಮೂಲಕವಾಗಿ ಇದನ್ನು ಮಾಡಿಸಿರುವುದರಿಂದ ಅದನ್ನು ನಲ ಅಂಡ್ ವೈಡ್ ಎಂದು ಡಿಕ್ಲೇರ್ ಮಾಡಿ ಜಮೀನನ್ನು ಅವರಿಗೆ ವಾಪಸ್ಸು ಕೊಡಬೇಕು ಅಂತ ಹೇಳಿ ಒಂದು ತೀರ್ಮಾನ ಬಂದಿದೆ. ತಮಗೆ ಗೊತ್ತಿದೆ. ಇದನ್ನೆಲ್ಲಾ ತಡೆಗಟ್ಟುವುದಕ್ಕೆ ಈಗ ಹತ್ತು ಯೂನಿಟವರೆಗೂ ಅವರು ಕೊಂಡುಕೊಳ್ಳಬಹುದು. ಅದಕ್ಕೆ ನಾವು ಪರ್ಮಿಷನ್ ಕೊಡುತ್ತೇವೆ. ಅವರು ಪ್ರಾಜೆಕ್ಟ ಅನ್ನು ನಮಗೆ ಕೊಟ್ಟು ಸ್ಯಾಟಿಸಫೈ ಆದರೆ ಅವರು ಎಷ್ಟು ಬೇಕಾದರೂ ಹಣ ಕೊಟ್ಟು, ರೈತ ಏನು ಹೇಳುತ್ತಾನೆ ಅಷ್ಟು ಹಣ ಕೊಟ್ಟು ಕೊಂಡುಕೊಳ್ಳಬಹುದು. ಮತ್ತು ಹಣ್ಣು ಮತ್ತು ಹೂವಿನ ಬೆಳೆ. ಈಗ ನಮ್ಮ ರಾಜ್ಯದಲ್ಲಿ ಹೂವಿನ ಬೆಳೆಗೆ ಇವತ್ತು ಎಷ್ಟು ಬೇಡಿಕೆ ಇದೆಯೆಂದರೆ ನಿಜವಾಗಿ ನಾವು ಈ ಒಂದು ಅಖಿಲಭಾರತ ಮಟ್ಟದಲ್ಲಿ ಮೊಟ್ಟಮೊದಲನೆಯದು ಆಗಬಹುದು ಅಂತ ಹೇಳಿ ನನಗೆ ಒಂದು ಆಸೆ ಇದೆ. ಇವತ್ತು ಅಷ್ಟರಮಟ್ಟಿನ ಬೇಡಿಕೆಗಳು ನಮ್ಮಲ್ಲಿ ಬರುತ್ತಿವೆ. ನಾವು ನಮ್ಮ ನಿರ್ಬಂಧಗಳನ್ನು ಜಾಸ್ತಿ ಮಾಡಿದಮೇಲೆ ತಮಗೆ ಗೊತ್ತಿದೆ, ಇಂಡೋ ಅಮೇರಿಕನ್ ಸೀಡ್ಸ್ ಅವರು ಉತ್ತರಪ್ರದೇಶದಲ್ಲಿ 1500 ಎಕರೆ ತೆಗೆದುಕೊಂಡು ಅಲ್ಲಿ ಅಭಿವೃದ್ಧಿ ಮಾಡುವುದಕ್ಕೆ ಹೋಗಿದ್ದಾರೆ. ಏಕೆಂದರೆ ನಾವು ಇಲ್ಲಿ ಜಮೀನನ್ನು ಅವರಿಗೆ ಹೆಚ್ಚಿಗೆ ಕೊಡುವುದಕ್ಕೆ ಆಗುವುದಿಲ್ಲ ಅಂತ ಹೇಳಿ ಅಲ್ಲಿಗೆ ಹೋಗಿದ್ದಾರೆ. ಆದ್ದರಿಂದ ಈಗ ಹಣ್ಣು ಮತ್ತ ಹೂ ಬೆಳೆಯುವುದಕ್ಕೆ ಇಪ್ಪತ್ತು ಯೂನಿಟಗಳವರೆಗೂ ಅವರು ಕೊಂಡುಕೊಳ್ಳಬಹುದು. ಅಂತ ಹೇಳಿ ಇದರಲ್ಲಿ ನಾವು ಅವಕಾಶವನ್ನು ಕಲ್ಪಿಸುತ್ತಿದ್ದೇವೆ. ಮತ್ತು ಸೆಕ್ಷನ್ 109ರೊಳಗೆ ಮೇಲ್ಕಂಡ ಪರಿಮಿತಿಯನ್ನು ನಾವೇನು ಹಾಕಿದ್ದೇವೆ ಈ ಪರಿಮಿತಿಯನ್ನು ಸಡಿಲಿಸುವುದಕ್ಕೆ ಸರ್ಕಾರಕ್ಕೆ ಅಧಿಕಾರ ಇದೆ. ಇಷ್ಟನ್ನು ನಾವು ಈಗ ಅಳವಡಿಸಿದ್ದೇವೆ. ದಯಮಾಡಿ ಇದನ್ನು ಸಭೆ ಒಪ್ಪಿಕೊಳ್ಳಬೇಕು ಅಂತ ಹೇಳಿ, ತಮ್ಮ ಪರವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ನಾನು ಈ ಭೂ ಸುಧಾರಣ ಕಾಯಿದೆಗೆ ಈ ಸರ್ಕಾರ ತರುತ್ತಾ ಇರತಕ್ಕಂಥ ತಿದ್ದುಪಡಿ ಏನು ಇದೆ ಇದನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತೇನೆ. ಕಾರಣ ಏಕೆ ಎಂದರೆ ಮಾನ್ಯ ಶ್ರೀ ದೇವರಾಜ ಅರಸುರವರು ಅಧಿಕಾರದಲ್ಲಿದ್ದಾಗ

ಮೊಟ್ಟಮೊದಲಬಾರಿಗೆ ಇಡೀ ಭಾರತದೇಶದಲ್ಲಿ ಒಂದು ಪ್ರಗತಿಪರವಾದಂಥ ಭೂ-ಸುಧಾರಣಾ ಕಾಯಿದೆಯನ್ನು ತಂದರು ಬಡವರಿಗೆ ಭೂಮಿ ಕೊಡತಕ್ಕಂಥ ಮೊಟ್ಟಮೊದಲ ಪ್ರಯತ್ನ ಇಲ್ಲಿ ನಡೆದಿತ್ತು. ಇವತ್ತು ಬಹುಶಃ ಇಪ್ಪತ್ತು ವರ್ಷಗಳ ನಂತರ ದಿವಂಗತ ದೇವರಾಜ ಅರಸು ತಂದಂಥ ಈ ಭೂ ಸುಧಾರಣಾ ಕಾಯಿದೆಗೆ ತಿದ್ದುಪಡಿ ತರುತ್ತಿರತಕ್ಕಂಥ ಹಿನ್ನೆಲೆ ಏನು ಇದೆ ಅದರ ಉದ್ದೇಶ ಏನು ಇದೆ, ಅದರ ಪರಿಣಾಮ ಏನು ಇದೆ ಈ ಮೂರು ಅಂಶಗಳನ್ನು ನಾವು ಗಮನಿಸಬೇಕು. ಎಂದು ನಾನು ಸರ್ಕಾರದಮುಂದೆ ನಿಮ್ಮ ಮುಖಾಂತರ ಹೇಳುತ್ತಿದ್ದೇನೆ. ಈ ಭೂಸುಧಾರಣಾ ಕಾಯಿದೆಯ್ನು ತಂದ ಹಿನ್ನೆಲೆ ಉಳುವವನಿಗೆ ಭೂಮಿ ಕೊಡಬೇಕು, ಸಣ್ಣ, ಮಧ್ಯಮ ರೈತ, ಬಡ ರೈತನಿಗೆ ಭೂಮಿ ಸಿಕ್ಕಬೇಕು. ಯಾರು ಉತ್ಪಾದನೆ ಮಾಡುತ್ತಾನೋ ಅವನಿಗೆ ಭೂಮಿಯಲ್ಲಿ ಭಾಗ ಸಿಗಬೇಕು ಎಂಬ ಉದ್ದೇಶದಿಂದ ಜಮೀನ್ದಾರಿ ವ್ಯವಸ್ಥೆಯನ್ನು, ಊಳಿಗಮಾನ್ಯ ವ್ಯವಸ್ಥೆಯನ್ನು ನಾಶಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಭೂ ಪರಿಮಿತಿ ಶಾಸನವನ್ನು ತಂದಿದ್ದು. ಅದರ ಜೊತೆಗೆ ಕೃಷಿರಂಗದಲ್ಲಿ ಉಳುವವನಿಗೆ ಭೂಮಿ ಸಿಕ್ಕಿದರೆ ಉತ್ಪಾದನೆ ಹೆಚ್ಚಾಗುತ್ತದೆ ಎನ್ನತಕ್ಕಂಥದ್ದು ಇನ್ನೊಂದು ಉದ್ದೇಶ. ಉತ್ಪಾದನೆ ಹೆಚ್ಚಾದರೆ ಸಾಮಾನ್ಯ ಜನರ ಜೀವನಮಟ್ಟ ಉತ್ತಮವಾಗುತ್ತದೆ ಎನ್ನತಕ್ಕಂಥ ಉದ್ದೇಶ ಆ ಕಾರಣಕ್ಕಾಗಿ ಈ ಭೂ ಸುಧಾರಣಾ ಕಾಯಿದೆಯನ್ನು ತಂದಿದ್ದು. ಇವತ್ತು ಯಾವ ಹಿನ್ನೆಲೆಯಲ್ಲಿ ಇದನ್ನು ತಿದ್ದುಪಡಿ ಮಾಡುತ್ತಿದ್ದಾರೆ ಅಂದರೆ ಇಮೊತ್ತು ವಿದೇಶಿ ಬಂಡವಾಳಗಾರರಿಗೆ ಅನುಕೂಲ ಮಾಡಿಕೊಡಲಿಕ್ಕೆ, ಅವರು ಹಾಕತಕ್ಕ ಬಂಡವಾಳ, ಅವರು ಸ್ಥಾಪನೆ ಮಾಡತಕ್ಕಂಥ ಕಾರ್ಖಾನೆಗಳಿಗೆ ಜಾಗ ಮಾಡಿಕೊಡಲಿಕ್ಕೆ ಭೂಮಿ ಬೇಕು. ಇನ್ನೊಂದು ಕಡೆ ವಿದೇಶಿ ಬಂಡವಾಳವನ್ನು ಕೃಷಿ ರಂಗದಲ್ಲಿ ತರತಕ್ಕಂಥದ್ದು. ಕೃಷಿ ರಂಗದಲ್ಲಿ ವಿದೇಶಿ ಬಂಡವಾಳವನ್ನು ಹಾಕತಕ್ಕಂಥದ್ದು ಮತ್ತು ಭಾರತದೇಶದಲ್ಲಿ ಇಮೊತ್ತು ಕೃಷಿ ರಂಗದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ತರತಕ್ಕಂಥದ್ದು. ಯಾವ ದೇವರಾಜಅರಸುರವರು ಭೂ ಮಾಲೀಕ ಪದ್ಧತಿಯನ್ನು ರದ್ದು ಮಾಡಿ ಉಳುವವನಿಗೆ ಭೂಮಿ ಬೇಕು ಎಂದು ಹೇಳಿದರೆ, ಇವತ್ತು ಹೊಸದಾಗಿ ಭೂಮಾಲೀಕ ಬಂಡವಾಳಗಾರರನ್ನು ಕೃಷಿ ರಂಗದಲ್ಲಿ ತರಲಿಕ್ಕೆ ಇಮೊತ್ತು ನಡೆಯುತ್ತಾ ಇರತಕ್ಕಂಥ ಪ್ರಯತ್ನ ...ಇದು. ಇಮೊತ್ತು ನೂರು ಎಕರೆ, ಇನ್ನೂರು ಎಕರೆ ಭೂಮಿಯನ್ನು ತೆಗೆದುಕೊಳ್ಳಬಹುದು ಎಂಬ ದೃಷ್ಟಿಯಿಂದ ಆ ಭೂ ಪರಿಮಿತಿ ಕಾಯಿದೆಗೆ ತಿದ್ದುಪಡಿ ತುರುತ್ತಿದ್ದರೆ ಸಣ್ಣ, ಬಡ ರೈತರು ಭೂಮಿಯನ್ನು ಕಳೆದುಕೊಳ್ಳತಕ್ಕಂಥದ್ದು ಸ್ಪಷ್ಟ. ರೈತರು ಯಾವ ಸ್ಥಿತಿಗೆ ಹೋಗುತ್ತಾರೆ ಎಂದು ಹೇಳಿದರೆ, ಸಣ್ಣ ರೈತರು ಒಂದು ಎಕರೆ, ಎರಡು ಎಕರೆ ಮೂರು ಎಕರೆ ಇಟ್ಟುಕೊಂಡಿರತಕ್ಕಂಥ ರೈತರೆಲ್ಲರೂ ಕೂಡ ತಮ್ಮ ಭೂಮಿಯನ್ನು ಕಳೆದುಕೊಂಡು ನಿರ್ಗತಿಕರಾಗಿ ಪಟ್ಟಣಗಳಿಗೆ ಸೇರುತ್ತಾರೆ. ಸೇರಲೇಬೇಕಾದಂಥ ಅನಿವಾರ್ಯ ಪರಿಸ್ಥಿತಿ ಇದರಿಂದ ಬರುತ್ತದೆ, ಪಟ್ಟಣಗಳ ಪರಿಸ್ಥಿತಿಯೂ ಕೆಡುತ್ತದೆ, ಇನ್ನೊಂದು ಕಡೆ ಸನ್ಮಾನ್ಯ ಅಧ್ಯಕ್ಷರೆ ಇಮೊತ್ತು ಅವರು ಏನು ಹೇಳುತ್ತಾರೆ ಹೂವಿನ ಬೆಲೆ. ಹೂವಿನ ಉತ್ಪಾದನೆ ಮತ್ತು ಹಣ್ಣು ನಿಜ. ಈ ದೇಶದಲ್ಲಿ ಹೂ ಬೇಕು ಹಣ್ಣೂ ಬೇಕು. ಮತ್ತೆ ಇದರ ಜೊತೆಗೆ ಮೀನನ್ನೂ ಕೃಷಿಗೆ ಸೇರಿಸುತ್ತಿದ್ದಾರೆ. ಇವೆಲ್ಲವೂ ಬೇಕು, ನಿಜ. ಆದರೆ ಇವೆಲ್ಲದಕ್ಕಿಂತ ಮುಖ್ಯವಾಗಿ ಮನುಷ್ಯನಿಗೆ ತಿನ್ನಲಿಕ್ಕೆ ಆಹಾರಬೇಕು. ನೀವು ಹೂವಿನ ಉತ್ಪಾದನೆ ಮಾಡಿ, ಹಣ್ಣನ್ನು ಉತ್ಪಾದನೆ ಮಾಡಿ ಇಸ್ರೇಲಿಗೂ ಬೇರೆ ದೇಶಗಳಿಗೂ ರಫ್ತು ಮಾಡಿದರೆ ಹಣ ಸಂಪಾದನೆ ಆಗುತ್ತದೆ. ವಿದೇಶಿ ಮಾರುಕಟ್ಟೆಗಳಲ್ಲಿ ನಮಗೆ ಬಂಡವಾಳ ಸಿಗುತ್ತದೆ. ಮತ್ತೆ ರೈತರು

ಶ್ರೀಮಂತರಾಗುವುದಕ್ಕೆ ಸಾಧ್ಯವಾಗುತ್ತದೆ. ರೈತರು ಶ್ರೀಮಂತರರಾಗುತ್ತಾರೆ ನೂರು, ಇನ್ನೂರು, ಮುನ್ನೂರು ಎಕರೆ ಇಟ್ಟುಕೊಂಡು ಅದನ್ನು ವಿದೇಶಿ ಬಂಡವಾಳಗಾರರಿಗೆ ಮಾರಾಟಮಾಡಿದಂತವರಿಗೆ ಹೆಚ್ಚು ಲಾಭ ಬರುತ್ತದೆ.-ಸಾಮಾನ್ಯ ಬಡ ರೈತನ ಪರಿಸ್ಥಿತಿ ಏನು? ಮತ್ತು ಈ ದೇಶದಲ್ಲಿ ಆಹಾರ ಉತ್ಪಾದನೆ ಪರಿಸ್ಥಿತಿ ಏನು ಎಂಬತಕ್ಕಂಥದ್ದನ್ನು ಸರ್ಕಾರ ಗಮನಿಸಬೇಕು.

ಈಗಾಗಲೇ ಕರ್ನಾಟಕ ರಾಜ್ಯದಲ್ಲಿ 67ಲಕ್ಷ ಟನಗಳಷ್ಟು ಆಹಾರ ಸಾಮಗ್ರಿಗಳ ಕೊರತೆ ಇದೆ. ಕ್ರಿ.ಶ2000 ಇಸವಿಯ ಹೊತ್ತಿಗೆ ಕರ್ನಾಟಕ ರಾಜ್ಯದ ಜನಸಂಖ್ಯೆಗೆ 1 ಲಕ್ಷದ 67ಸಾವಿರ ಟನಗಳಷ್ಟು ಆಹಾರೋತ್ಪಾದನೆಯ ಅವಶ್ಯಕವಿದೆ... ಇವತ್ತು ಕರ್ನಾಟಕ ರಾಜ್ಯದಲ್ಲಿ ಕೇವಲ 87 ಲಕ್ಷ ಟನಗಳಷ್ಟು ಮಾತ್ರ ಆಹಾರೋತ್ಪಾದನೆ ದಾಸ್ತಾನು ಇದೆ. ಇವತ್ತು ನಾವು ಭೂ ಸುಧಾರಣೆ ಕಾಯ್ದೆಗೆ ತಿದ್ದುಪಡಿ ತಂದು, ಹೂವು ಮತ್ತು ಹಣ್ಣುಗಳನ್ನು ಬೆಳೆಸಲಿಕ್ಕೆ ವಿದೇಶೀ ಬಂಡವಾಳಗಾರರಿಗೆ 100-200 ಎಕರೆ ಜಮೀನನ್ನು ಮಾರಾಟ ಮಾಡಿದರೆ, ಒಂದು ಕಡೆ ಆಹಾರದ ಉತ್ಪಾದನೆಯ ಮೇಲೆ ಹೊಡೆತ ಬೀಳುತ್ತದೆ, ಇನ್ನೊಂದು ಕಡೆ ಸಣ್ಣ ರೈತರು, ಬಡ ರೈತರು, ಮಧ್ಯಮ ವರ್ಗದ ರೈತರು ಭೂಮಿಯನ್ನು ಕಳೆದುಕೊಳ್ಳತಕ್ಕ ಪರಿಸ್ಥಿತಿ ಬರುತ್ತದೆ. ಈ ರೀತಿಯ ಒಂದು ತಿದ್ದುಪಡಿಯನ್ನು ಭೂಸುಧಾರಣಾ ಕಾಯ್ದೆಗೆ ತರುವುದರ ಮೂಲಕ ನೀವು ಕರ್ನಾಟಕ ರಾಜ್ಯದ ಬಡ ರೈತರಿಗೆ, ಮಧ್ಯಮ ವರ್ಗದ ರೈತರಿಗೆ ಕೃಷಿ ಕಾರ್ಮಿಕರಿಗೆ ದ್ರೋಹ ಮಾಡುತ್ತಿದ್ದೀರಿ, ಮೋಸ ಮಾಡುತ್ತಿದ್ದೀರಿ.

ಶ್ರೀ ಡಿ.ಟಿ. ಜಯಕುಮಾರ್ : ಇವತ್ತು ಕೋಟ್ಯಾಂತರ ರೂಪಾಯಿಗಳ ಯೋಜನೆಗಳ ಪಕ್ಕದ ರಾಜ್ಯಗಳಿಗೆ ಹೋಗುತ್ತಿವೆ. ನಿರುದ್ಯೋಗ ಸಮಸ್ಯೆ ನಿವಾರಣೆಯಾಗುವುದಾದರೂ ಹೇಗೆ?

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನನಗೆ ಆ ವಿಚಾರ ಗೊತ್ತಿದೆ. ಬೇಕಾದರೆ ಅದರ ಬಗ್ಗೆ ಚರ್ಚೆ ಮಾಡೋಣ. ಅದಕ್ಕೇನೂ ತೊಂದರೆಯಿಲ್ಲ. ಅಮೇರಿಕಾದಲ್ಲೂ ನಿರುದ್ಯೋಗ ಸಮಸ್ಯೆ ಇದೆ ಎಂಬುದು ತಮಗೂ ಗೊತ್ತಿರಬೇಕು. ಅಮೇರಿಕಾದಲ್ಲಿ ಇವತ್ತು ಶೇಕಡ 38.7 ರಷ್ಟು ನಿರುದ್ಯೋಗ ಸಮಸ್ಯೆ ಇ ಮಾನ್ಯ ಜಯಕುಮಾರರವರಿಗೆ ಈ ವಿಚಾರ ಗೊತ್ತಿಲ್ಲದಿದ್ದರೆ ದಯವಿಟ್ಟು ತಿಳಿದುಕೊಳ್ಳಿ. ಕೇವಲ ಕಾರ್ಖಾನೆಗಳನ್ನು ಸ್ಥಾಪನೆ ಮಾಡಿ ಅಂತರ್ ರಾಷ್ಟ್ರೀಯ ಮಾರುಕಟ್ಟೆ ಪ್ರವೇಶ ಮಾಡಿದರೆ ನಿರುದ್ಯೋಗ ಸಮಸ್ಯೆ ನಿವಾರಣೆಯಾಗುತ್ತದೆ ಎಂಬ ನಿಮ್ಮ ಭಾವನೆ ತಪ್ಪು. ಭೂ ಸುಧಾರಣಾ ಕಾಯ್ದೆಗೆ ನೀವು ತಂದಿರತಕ್ಕಂತಹ ತಿದ್ದುಪಡಿಯಿಂದ ಕರ್ನಾಟಕ ರಾಜ್ಯದ ಬಡ ರೈತರಿಗೆ ನೀವು ದ್ರೋಹ ಮಾಡಿದಂತಾಗುತ್ತದೆ. ಕೃಷಿ ಬಂಡವಾಳಗಾರರ ಇಲ್ಲಿಗೆ ಪ್ರವೇಶ ಮಾಡುತ್ತಾರೆ. ಎರಡು ತಿಂಗಳ ಹಿಂದೆ ಬೆಂಗಳೂರಿನಲ್ಲಿ ನಡೆದ ಜನತಾದಳದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯಲ್ಲಿ ನಮ್ಮ ಪಕ್ಷ ಮಾನ್ಯ ನರಸಿಂಹರಾವರವರ ಸರ್ಕಾರದ ಹೊಸ ಆರ್ಥಿಕ ಧೋರಣೆಗಳನ್ನು ವಿರೋಧ ಮಾಡುತ್ತದೆ ಎಂದು ನೀವು ನಿರ್ಣಯಮೊಂದನ್ನು ಅಂಗೀಕರಿಸಿರುತ್ತೀರಿ. ಮಾನ್ಯ ಮಧುದಂಡವತೆಯವರು ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಇಂತಹ ನಿರ್ಣಯವೊಂದನ್ನು ಮಂಡಿಸಿದ್ದರು. ನೀವು ಅದನ್ನು ಅಂಗೀಕರಿಸಿದ್ದೀರಿ. ಇಂತಹ ಒಂದು ನಿರ್ಣಯವನ್ನು ಅಂಗೀಕರಿಸಿರುವ ನೀವು, ಮಾನ್ಯ ನರಸಿಂಹರಾವ್ ಸರ್ಕಾರದ ಹೊಸ ಆರ್ಥಿಕ ಧೋರಣೆಗಳಿಗನುಗುಣವಾಗಿ ಕೃಷಿ ರಂಗದಲ್ಲಿ ವಿದೇಶಿ ಬಂಡವಾಳವನ್ನು

ಆಹ್ವಾನ ಮಾಡಲಿಕ್ಕೆ ಭೂ ಸುಧಾರಣಾ ಕಾಯ್ದೆಯನ್ನು ತಿದ್ದುಪಡಿ ಮಾಡುತ್ತಿದ್ದೀರಿ. ಇದು ಕರ್ನಾಟಕ ರಾಜ್ಯದ ಬಡ ರೈತರಿಗೆ, ಸಣ್ಣ ರೈತರಿಗೆ ನೀರು ಮಾಡತಕ್ಕ ದ್ರೋಹ. ಆದರ ಜೊತೆಗೆ 79 ಮತ್ತು 80 ನೇ ಕಾಯ್ದೆಗೆ ನೀವೇನು ತಿದ್ದುಪಡಿ ಮಾಡುತ್ತಿದ್ದೀರಿ, ಅದು ಮಾನ್ಯ ದೇವರಾಜ್ ಅರಸರವರ ಕಾಲದಲ್ಲಿ ಮಿತಿ 50 ಸಾವಿರ ಇತ್ತು. ಮಾನ್ಯ ವೀರೇಂದ್ರ ಪಾಟೀಲರ ಕಾಲದಲ್ಲಿ ಅದು 1 ಲಕ್ಷ ರೂಪಾಯಿಗಳು ಆಯಿತು. ಈಗ ನೀವು ಇದನ್ನು 2 ಲಕ್ಷ ರೂಪಾಯಿಗಳಿಗೆ ಏರಿಸುತ್ತಿದ್ದೀರಿ. ಅದುದರಿಂದ ಭೂ ಸುಧಾರಣಾ ಕಾಯ್ದೆಗೆ ಈ ಸರ್ಕಾರ ತಂದಿರತಕ್ಕಂತಹ ತಿದ್ದುಪಡಿಯನ್ನು ನಾನು ಸ್ಪಷ್ಟವಾಗಿ ವಿರೋಧ ಮಾಡುತ್ತೇನೆ. ಇದು ಕರ್ನಾಟಕ ರಾಜ್ಯದ ಚರಿತ್ರೆಯಲ್ಲಿ ಒಂದು ಕರಾಳ ದಿವಸವಾಗಿ ಉಳಿಯುತ್ತದೆ. ಅದರ ಪಾಠವನ್ನು ನೀವು ಕಲಿಯಬೇಕಾಗುತ್ತದೆ ಎಂಬ ಒಂದು ಎಚ್ಚರಿಕೆಯನ್ನು ಸರ್ಕಾರಕ್ಕೆ ಈ ಮೂಲಕ ನೀಡುತ್ತಿದ್ದೇನೆ.

+ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೇ, ಸರ್ಕಾರವು ಗ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿಯನ್ನು ತಂದಿದೆ. ಈ ತಿದ್ದುಪಡಿಯನ್ನು ತಂದರೆ ಏನಾಗುತ್ತದೆ, ತರದಿದ್ದರೆ ಏನಾಗುತ್ತದೆ ಎಂಬ ಪ್ರಶ್ನೆ ಈಗ ನಮ್ಮ ಮುಂದಿದೆ. ಈ ಭೂ ನ್ಯಾಯ ಮಂಡಳಿಗಳು ಅಥವಾ ಭೂ ಸುಧಾರಣೆಗಳ ಮೂಲಕ ನೀವೇನು ಜಮೀನು ಕೊಡುತ್ತೀರಿ. ಅದು ಯಾವುದಾದರೊಂದು ಕೈಗಾರಿಕೆಗೆ ಆಗಿರಬಹುದು, ತರಕಾರಿ ಬೆಳೆಯಲು ಆಗಿರಬಹುದು, ಹಣ್ಣು ಬೆಳೆಯಲು ಆಗಿರಬಹುದು, ಮೀನುಗಾರಿಕೆಗೆ ಆಗಿರಬಹುದು. ಅದು ಬೇಕು ಎನ್ನುವಂತಹ ಸಂದರ್ಭದಲ್ಲಿ ರೈತ ಏನು ಮಾಡುತ್ತಾನೆ ಎಂದರೆ, ಅವನು ಇವತ್ತು ಅಧಿಕಾರಿಗಳ ಬಳಿಹೋಗಿ ಲಂಚ ಕೊಟ್ಟು 15 ವರ್ಷಕ್ಕೆ ಪರಭಾರೆ ಮಾಡುವುದನ್ನು ಮುಂಚಿತವಾಗಿ ಬರೆದು, ಏನಾದರೂ ಮಾಡಿ ಅವನು ತನ್ನ ಜಮೀನು ಮಾರಾಟ ಮಾಡುತ್ತಾನೆ. ಆದುದರಿಂದ ಈಗ 15 ವರ್ಷಕ್ಕೆ ಇರತಕ್ಕ ಮಿತಿಯನ್ನು ನೀವು 4-6 ವರ್ಷಕ್ಕೆ ಕಡಿಮೆ ಮಾಡಿದರೆ ಈ ಸಮಸ್ಯೆ ನಿವಾರಣೆಯಾಗುತ್ತದೆ. ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಮಾನ್ಯ ಸಚಿವರು ದಯವಿಟ್ಟು ಈ ಬಗ್ಗೆ ಚಿಂತನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದೇನೆ. ಮಾನ್ಯ ದೇವರಾಜ್ ಅರಸರವರು ದೈವಾಧೀನರಾಗುವವರೆಗೆ ನಾನು ಅವರ ಜೊತೆಯಲ್ಲೇ ಇದ್ದೆ. ಅವರದೇನು ಕಮಿಟಮೆಂಟ್ ಇತ್ತೋ ಅದಕ್ಕೆ ನಾನು ಬದ್ಧನಾಗಿದ್ದೇನೆ, ಅದನ್ನು ನಾನು ಒಪ್ಪುತ್ತೇನೆ. ಆದರೆ ಈಗ ವಸ್ತುಸ್ಥಿತಿ ಏನು ಇದೆ ಎನ್ನುವುದನ್ನು ಮಾನ್ಯ ಶ್ರೀರಾಮರೆಡ್ಡಿಯವರು ದಯವಿಟ್ಟು ಗಮನಿಸಬೇಕು. ಇವತ್ತು ಸಾವಿರಾರು ಎಕರೆ ಜಮೀನನ್ನು ಗೃಹ ನಿರ್ಮಾಣ ಸಂಘಗಳವರು ತೆಗೆದುಕೊಂಡಿದ್ದಾರೆ. ಅದು ಜಮೀನು? ಈಗ ಬೆಂಗಳೂರು ನಗರ ಹಾಗೂ ಇತರ ದೊಡ್ಡ ದೊಡ್ಡ ನಗರಗಳ ಸುತ್ತಮುತ್ತಲೂ ರೆಸ್ಟಾಟ್ಸ ಮಾಡಿದ್ದಾರೆ, ಕ್ಲಬ್ಸ ಮಾಡಿದ್ದಾರೆ. ಅವರಿಗೆ ಜಮೀನುಗಳನ್ನು ಯಾರು ಕೊಟ್ಟಿದ್ದರು? ಜಮೀನುಗಳನ್ನು ಅಕ್ವೈರ್ ಮಾಡಿ ನಾವು ಅವರಿಗೆ ಕೊಟ್ಟಿದ್ದೇವೆಯೇ? ರೈತರೇ ಆ ಜಮೀನುಗಳನ್ನು ಅಗ್ರಿಮೆಂಟ್ ಮತ್ತು ಜಿ.ಪಿ.ಎ.ಗಳ ಮೂಲಕ ಅವರಿಗೆ ಮಾರಿಕೊಂಡಿರುತ್ತಾರೆ. ಕನಿಷ್ಟ 4-6 ಲಕ್ಷ ರೂಪಾಯಿಗಳು ಬೆಲೆ ಬಾಳುವ ಜಮೀನನ್ನು ಕೇಳಲ 1-2 ಲಕ್ಷ ರೂಪಾಯಿಗಳಿಗೆ ಮಾರಾಟ ಮಾಡಿಕೊಂಡಿರುತ್ತಾರೆ. 20-30 ಸಾವಿರ ರೂಪಾಯಿಗಳ ಹಣ ಮಾತ್ರ ಅವರ ಕೈಗೆ ಹೋಗುತ್ತದೆ.

ಪೂರ್ತಿ ಹಣ ಅವರ ಕೈಗೆ ಹೋಗುವುದಿಲ್ಲ. ಇವತ್ತು ಹಲವು ನಗರಗಳಲ್ಲಿ ಭೂಮಿಯ ಬೆಲೆ 8-10 ರಷ್ಟು ಹೆಚ್ಚಾಗುತ್ತಿದೆ. ಇದು ತಮಗೂ ಗೊತ್ತಿದೆ. ನಾವು ಏನೂ ಮಾಡಿದರೂ ಅದನ್ನು ಉಳಿಸಿಕೊಳ್ಳಲಿಕ್ಕಾಗಲಿಲ್ಲ. ಈ ಕಾನೂನು ಬದಲಾವಣೆ ಮಾಡಿದ್ದರಿಂದ, ಅವರ ಜಮೀನನ್ನು ಕೊಡಲೇಬೇಕು ಎಂದು ಏನೊಂದು ಕಂಪಲಷರಿ ಇತ್ತೋ, ಅದೀಗ ಇಲ್ಲವೇ ಇಲ್ಲ. ಕೆಲವರು 2-3 ಎಕರೆ ಖುಷ್ಕಿ ಜಮೀನನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ. ಈ ಕಾಲದಲ್ಲಿ 3-4 ಎಕರೆ ಜಮೀನಿನಿಂದ ಏನೇನೇ ಮಾಡುವುದಕ್ಕಾಗುವುದಿಲ್ಲಲ. ಅದರ ಬದಲಾಗಿ ಇಂತಹ ಕಾರ್ಖಾನೆಗಳಾಗಲೀ ಅಥವಾ ಬೃಹದಾಕಾರವಾದ ತೋಟಗಾರಿಕೆ ಅಥವಾ ಪುಷ್ಪೋದ್ಯಮಗಳು ಇಲ್ಲಿಗೆ ಬಂದರೆ, ಅಲ್ಲಿ 50-75 ರೂಪಾಯಿಗಳಿಗೆ ಕೂಲಿ ಕೊಡುತ್ತಾರೆ. ನನ್ನದೇ ತಾಲ್ಲೂಕಿನ ಒಂದು ಉದಾಹರಣೆಯನ್ನು ಹೇಳುವುದಾದರೆ, ಅಲ್ಲಿ ಈಗಾಗಲೇ ಇಂತಹ ಉದ್ಯಮಮೊಂದು ತಲೆ ಎತ್ತಿದೆ. ಅವರು ತಾವು ರೈತರು ಎಂದು ಆಂಧ್ರದಿಂದ ಸರ್ಟಿಫಿಕೇಟ್ ತೆಗೆದುಕೊಂಡು ಬಂದು ಅಲ್ಲಿ 50 ಎಕರೆ ಜಮೀನನ್ನು ಕೊಂಡುಕೊಂಡಿದ್ದಾರೆ. ಈಗ ಅಲ್ಲಿ ಹೋಗಿ ನೋಡಿದರೆ 50 ಕೋಟಿ ರೂಪಾಯಿಗಳ ಬಂಡವಾಳ ಅಲ್ಲಿ ಹೂಡಿದ್ದಾರೆ. ಒಬ್ಬೊಬ್ಬರಿಗೆ ಅಲ್ಲಿ 25-50 ರೂಪಾಯಿಗಳ ಕೂಲಿ ಸಿಗುತ್ತಿದೆ. ಆದುದರಿಂದ ನಾವು ವಸ್ತುಸ್ಥಿತಿಯನ್ನು ಮೊದಲು ಯೋಚನೆ ಮಾಡುತ್ತೇವೆ. ಬರೀ ಬಂಡವಾಳಶಾಹಿ, ಫಾರಿನ್ ಮನಿ ಎಂದು ನಂಬಿಕೊಂಡಿರುವುದಿಲ್ಲ. ನಮ್ಮ ರಾಷ್ಟ್ರದವರು ಅವರ ಜೊತೆಗೆ ಕೊಲ್ಯಾಬರೇಷನ್ ಮಾಡಿಕೊಂಡು ಬಂಡವಾಳ ಹೂಡುತ್ತಿದ್ದೇವೆ. ಇದನ್ನೆಲ್ಲಾ ಯೋಚನೆ ಮಾಡಿ ಈ ಕಾನೂನು ತಂದಿದ್ದೇವೆಯೇ ವಿನಃ ನಾವು ರೈತರ ಜಮೀನನ್ನು ಕಿತ್ತುಕೊಂಡು ಇದನ್ನು ಮಾಡಬೇಕೆಂದೇನೂ ಇಲ್ಲ. ನಾಳೆ ದಿವಸ ರೈತ ಕೊಡುವುದಿಲ್ಲ ಎಂದರೆ ಅವನ ಹತ್ತಿರ ತೆಗೆದುಕೊಂಡು ಹೋಗಿ ನಾವು ಅಕ್ವೈರ್ ಮಾಡಿ ಕೊಡುವುದಿಲ್ಲ ಎಂದು ಹೇಳಿದ್ದಾರೆ. ಎಲ್ಲಿ ಬಹಳ ಅವಶ್ಯಕತೆ ಇದೆ, ಅಂತಹ ಕಡೆ ಮಾತ್ರ ನಾವು ಲ್ಯಾಂಡ್ ಅಕ್ವೈರ್ ಮಾಡಲಿಕ್ಕೆ ಹೋಗುತ್ತೇವೆಯೇ ವಿನಹ ಉಳಿದೆಡೆ ನಾವು ರೈತರ ಜಮೀನನ್ನು ಕಿತ್ತು ಬೇರೆಯವರಿಗೆ ಕೊಡಬೇಕೆಂದು ನಾವು ಹೋಗುವುದಿಲ್ಲ. ಏಕೆಂದರೆ ರೈತರಿಗೆ ಸಿಗಬೇಕಾದಷ್ಟು ಹಣ ಸಿಗುವುದಿಲ್ಲ. ಇವತ್ತು 8 ಲಕ್ಷ, 10 ಲಕ್ಷ ಇರುವಾಗ ನಾವು 2 ಲಕ್ಷ ... ನಾಲ್ಕು ದಿವಸದ ಹಿಂದೆ ಒಂದು ಪ್ರಕರಣ ಅಕ್ವಿಸಿಷನ್‌ಗೆ ಬಂದಿತ್ತು.

ಸಂಬಂಧಪಟ್ಟ ಅಧಿಕಾರಿಯವರು ಅದನ್ನು ಒಂದೂವರೆ ಲಕ್ಷ ರೂಪಾಯಿಗಳೆಂದು ಶಿಫಾರಸ್ಸು ಮಾಡಿ ಕಳುಹಿಸಿದ್ದರು. ಇವತ್ತು ಅಲ್ಲಿ ಮಾರ್ಕೆಟ್ ವ್ಯಾಲ್ಯೂ 12 ಲಕ್ಷ ರೂಪಾಯಿಗಳಿತ್ತು. ಲ್ಯಾಂಡ್ ಅಕ್ವಿಸಿಷನ್ ಆಫೀಸರ್ ಒಂದೂವರೆ ಲಕ್ಷ ರೂಪಾಯಿಗಳೆಂದು ಹಾಕಿರುವುದನ್ನು ನಾನು ಒಪ್ಪದೇ ಮಾರ್ಕೆಟ್ ವ್ಯಾಲ್ಯೂ 12 ಲಕ್ಷ ರೂಪಾಯಿಗಳು ಇದೆ ಹಾಗೆ ಮಾಡಿ ಕೊಡಿ ಎಂದೇಳಿ ಅವಾರ್ಡ್ ಪಾಸ್ ಮಾಡಲಿ ಎಂದು ನಾನು ಹೇಳಿ ಕಳುಹಿಸಿದೆ. ಈ ಸ್ಥಿತಿಯನ್ನು ಗಮನಿಸಿದರೆ ಎಂತಹ ಪರಿಸ್ಥಿತಿ ಉಂಟಾಗಿದೆ ಎಂಬುದು ತಿಳಿಯುತ್ತದೆ. ಮಾನ್ಯ ಶಿವರಾಮೇಗೌಡರು ಒಂದು ಮಾತನ್ನು ಹೇಳಿದರು. ವಾಸ್ತವವಾಗಿ ನಾವು ಲ್ಯಾಂಡ್ ಟ್ರಿಬ್ಯೂನಲನಿಂದ ಕೊಟ್ಟ ಜಮೀನು ಅಥವಾ ದರಖಾಸ್ತು ಅಧಿಸೂಚನೆಯಲ್ಲಿ ಕೊಟ್ಟ ಜಮೀನನ್ನು 15 ವರ್ಷಗಳ ಪರಭಾರೆ ಮಾಡದಂತೆ ಪರಿಮಿತಿ ಹಾಕಿದ್ದೇವೆ. ಅಷ್ಟರೊಳಗೆ ಜಮೀನಿನ ಒಡೆತನ ಬೇರೆಯವರಿಗೆ ಕೊಡಬಾರದೆಂದು ಮಾಡಿದ್ದೇವೆ. ಇವತ್ತು ಪರಿಸ್ಥಿತಿ ಏನಾಗಿದೆ ಎಂದರೆ, 2-3 ಎಕರೆ ಜಮೀನುಗಳನ್ನು ಇಟ್ಟುಕೊಂಡಿರುವವರು ಅದರಿಂದ ಜೀವನ

ಮಾಡುವುದಕ್ಕಾಗುವುದಿಲ್ಲ ಎಂದು ಭಾವಿಸಿ, ಮನೆಯೊಳಗೆ ಏನೋ ತೊಂದರೆ ಇದೆ, ಮಕ್ಕಳಿಗೆ ಮದುವೆ ಮಾಡಬೇಕು ಅಥವಾ ವಯಸ್ಸಾಗಿದೆ ಮುಂತಾದ ಕಾರಣಗಳಿಂದಾಗಿ ನಾವು ಜಮೀನನ್ನು ಮಾರಿಕೊಳ್ಳಬೇಕು ಎಂದರೆ ಇವತ್ತು ಪ್ರತಿಯೊಂದಕ್ಕೂ ಸರ್ಕಾರದ ಹತ್ತಿರ ಬರಬೇಕು. ಸರ್ಕಾರವೂ ಕೂಡ 3 ತಿಂಗಳು, 6 ತಿಂಗಳು ಇದ್ದರೆ ರಿಲ್ಯಾಕ್ಸ್ ಮಾಡುತ್ತದೆಯೇ ವಿನಹ 2-3 ವರ್ಷ ಆಗಿದ್ದರೆ ಆ ಪರಿಮಿತಿಯನ್ನು ರಿಲ್ಯಾಕ್ಸ್ ಮಾಡಲು ಬರುವುದಿಲ್ಲ. ಈ ಕಾರಣದಿಂದ ಅವರು ಅರ್ಧಂಬರ್ಧಕ್ಕ ಜಮೀನು ಮಾರಿಕೊಳ್ಳುತ್ತಾರೆ. ತಮ್ಮ ಜಮೀನುಗಳಿಗೆ ಎಷ್ಟು ಬೆಲೆ ಸಿಗುತ್ತದೆಯೋ ಅಷ್ಟಕ್ಕೆ ಮಾರಿಕೊಂಡು, ಸದ್ಯಕ್ಕೆ ತಮ್ಮ ಕಷ್ಟ ನಿವಾರಿಸಿಕೊಂಡರೆ ಸಾಕು ಎನ್ನುತ್ತಾರೆ. ಆದ್ದರಿಂದ ಅವರ ಅನಿಸಿಕೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಪರಿಮಿತಿ ಮೊದಲು 6 ವರ್ಷ ಇತ್ತು, ಆಮೇಲೆ 10 ವರ್ಷ ಇತ್ತು, ಈಗ 15 ವರ್ಷಕ್ಕೆ ಇದೆ. ಇದರಿಂದ ಬಹಳಷ್ಟು ಬಡ ರೈತರಿಗೆ ತೊಂದರೆಯಾಗುತ್ತಿದೆ. ನಾನು ಮಾನ್ಯ ಶಿವರಾಮೇಗೌಡರ ವಾದವನ್ನು ಒಪ್ಪಿಕೊಂಡು ಎಲಿಯಸೇಷನ್ ಪೀರಿಯಡ್ ಅನ್ನು ಕಡಿಮೆ ಮಾಡುವುದಕ್ಕೆ ಯೋಚನೆ ಮಾಡುತ್ತೇವೆ ಎಂಬ ಭರವಸೆಯನ್ನು ಕೊಡುತ್ತಿದ್ದೇನೆ. ಒಂದು ಮಾತನ್ನು ನಾನು ಮಾನ್ಯ ಶ್ರೀರಾಮರೆಡ್ಡಿಯವರಿಗೆ ಹೇಳಬಯಸುತ್ತೇನೆ. ಮಾನ್ಯ ಶ್ರೀರಾಮರೆಡ್ಡಿಯವರ ಎಲ್ಲರೂ ಪಟ್ಟಣಗಳಿಗೆ ಬರುತ್ತಾರೆ ಎಂಬ ಚಿಂತನೆ ಸರಿಯಾಗಿದೆ. ಹಳ್ಳಿಯಲ್ಲಿ ಇದ್ದುಕೊಂಡು ಜೀವನ ಮಾಡುವುದು ಇವತ್ತು ಕಷ್ಟವಾಗಿದೆ. ಕೆಲವರಂತೂ ಅನಿವಾರ್ಯವಾಗಿ ಪಟ್ಟಣಕ್ಕೆ ವಿಧಿಯಿಲ್ಲದೇ ಬರಲೇಬೇಕಾಗುತ್ತದೆ. ಯಾವಾಗ ಕೈಗಾರಿಕೆಗಳು ಜಾಸ್ತಿಯಾಗುತ್ತವೆ, ಹೊಸ ಹೊಸ ಉದ್ಯೋಗಾವಕಾಶಗಳು ಸಿಗುತ್ತವೆ, ಆಗ ಹಳ್ಳಿಗಳಿದ್ದುಕೊಂಡು ಅವರು ಏನು ಮಾಡುತ್ತಾರೆ? ಆಗ ಅವರು ಪಟ್ಟಣಕ್ಕೆ ಬರಲೇಬೇಕಾಗುತ್ತದೆ. ಕೆಲವು ಕಡೆ ನಾವು ನೋಡಿದ್ದೇವೆ. ಕೆಲವರು ಕಾಸ್ಟಲೀ ಆಗಿರತಕ್ಕ ಜಮೀನುಗಳನ್ನು ಮಾರಿ ಬಿಟ್ಟು ದೂರ ದೂರದ ಹಳ್ಳಿಗಳಲ್ಲಿ ಹೋಗಿ ಅಗ್ಗವಾಗಿ ಭೂಮಿಯನ್ನು ಕೊಂಡುಕೊಳ್ಳುತ್ತಾರೆ. ಇಲ್ಲಿ ರೈತರಿಗೆ ಜಮೀನು ಮಾರಬೇಡಿ ಎಂದೂ ಹೇಳಿದರೂ ಅವರು ಕದ್ದು ಮಾರುತ್ತಾರೆ. ಅಗ್ರಿಮೆಂಟೋ, ಜಿ.ಪಿ.ಎ. ಮಾಡಿಕೊಂಡು ಆತ ಜಮೀನು ಮಾರಿ ಬಿಡುತ್ತಾನೆ. ಇದರಿಂದ ಸರ್ಕಾರಕ್ಕೂ ಆದಾಯ ಇಲ್ಲ. ರೈತರಿಗೂ ಆದಾಯ ಇಲ್ಲ. ಇದೆಲ್ಲಾ ವಸ್ತು ಸ್ಥಿತಿಯನ್ನು ನಾವು ಪರಿಶೀಲನೆ ಮಾಡಿಯೇ ಇದನ್ನು ತಂದಿದ್ದೇವೆ. ದಯವಿಟ್ಟು ಈ ಸದನ ಇದನ್ನು ಒಪ್ಪಿಕೊಳ್ಳಬೇಕೆಂದು ತಮ್ಮ ಮೂಲಕ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಒಂದೆರಡು ವಿಷಯಗಳನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಹಳ್ಳಿಗಳು ನಾಶವಾಗುತ್ತಿವೆಯಾದ್ದರಿಂದ ಹಳ್ಳಿಗರು ಪಟ್ಟಣಕ್ಕೆ ವಿಧಿಯಿಲ್ಲದೇ ಬರುತ್ತಿದ್ದಾರೆ, ಹಳ್ಳಿಗಳಲ್ಲಿದ್ದುಕೊಂಡು ಅವರು ಜೀವನ ಮಾಡುವುದಕ್ಕಾಗುವುದಿಲ್ಲ ಎಂದು ಮಾನ್ಯ ಜಾಲಪ್ಪನವರು ಹೇಳಿದರು. ಅವರ ಈ ವಾದವನ್ನು ಈ ದೇಶದಲ್ಲಿ ಎಲ್ಲರೂ ಒಪ್ಪಿ ಬಿಟ್ಟರೆ, ಭಾರತ ದೇಶದಲ್ಲಿರತಕ್ಕ 12 ಲಕ್ಷ 62 ಸಾವಿರ ಹಳ್ಳಿಗಳು ಮುಳುಗಿದಂತೆಯೇ ಸರಿ. ಎಲ್ಲರೂ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳಿಗೆ ಬಂದು ಬಿಟ್ಟರೆ ಹೇಗೆ? ಭಾರತ ದೇಶದ ಬಗ್ಗೆ ಕನಿಷ್ಟ ಪ್ರಜ್ಞೆ ಇರತಕ್ಕವರು ಖಂಡಿತವಾಗಿ ಈ ರೀತಿ ಮಾತನಾಡಲಿಕ್ಕೆ ಸಾಧ್ಯವಿಲ್ಲ. ಹಳ್ಳಿಗಳನ್ನೆಲ್ಲಾ ಬಿಟ್ಟು ಎಲ್ಲರೂ ಪಟ್ಟಣಕ್ಕೆ ಬಂದು ಬಿಡಲಿ ಎಂಬ ನಿಮ್ಮ ವಾದ ಇದೆಯಲ್ಲ, ಈ ದೇಶದ ಪರಿಸ್ಥಿತಿ ಬಗ್ಗೆ ಕನಿಷ್ಟ ಆಲೋಚನೆ ಮಾಡತಕ್ಕ...

MR. SPEAKER : Please do not misquote the Hon'ble Minister. I have been hearing both the Hon'ble Minister and yourself. You are misquoting the Minister. It will all go into the records. ಎಲ್ಲರೂ ಹಳ್ಳಿಗಳನ್ನು ಬಿಟ್ಟು ಪಟ್ಟಣಕ್ಕೆ ಬಂದು ಬಿಡಿ ಎಂದು ಮಾನ್ಯ ಸಚಿವರು ಹೇಳಲಿಲ್ಲ.

ಶ್ರೀ ಎಂ. ನಾರಾಯಣ ಸ್ವಾಮಿ : ಹಳ್ಳಿಗಾಡಿನವರ ಬಗ್ಗೆ ನಿಮಗೆ ಹೇಗೆ ಕಾಳಜಿ ಇದೆಯೋ, ಹಾಗೆಯೇ ಮಾನ್ಯ ಜಾಲಪ್ಪನವರಿಗೂ ಅವರ ಬಗ್ಗೆ ಕಾಳಜಿ ಇದೆ.

ಅಧ್ಯಕ್ಷರು : ಮಾನ್ಯ ನಾರಾಯಣ ಸ್ವಾಮಿಯವರೇ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಮೊನ್ನೆ ಭಾರತದ ಕೃಷಿಯ ಚಿತ್ರವನ್ನು ಕೊಡುವಾಗ ಭಾರತ ಸರ್ಕಾರದವರು ಕೆಲವು ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರಿಗೆ ಈ ಮಾತನ್ನು ತಿಳಿಸಲಿಕ್ಕೆ ನಾನು ಇಚ್ಛಿಪಡುತ್ತೇನೆ.

7.30 ಪಿ.ಎಂ

In the total holdings in India, 68% of it belong to small holders. ಅದನ್ನು ``Earth owned by poor'' ಎನ್ನುವ ಶೀರ್ಷಿಕೆಯ ಮೇಲೆ ಅವರು ಹೇಳಿದ್ದಾರೆ. ಅದರಲ್ಲಿ ಪರಿಶಿಷ್ಟಜಾತಿ / ಪರಿಶಿಷ್ಟ ವರ್ಗಗಳಲ್ಲಿ ಈ ಹತ್ತು ವರ್ಷಗಳಲ್ಲಿ, ಅವರು ಪಶ್ಚಿಮ ಬಂಗಾಳ ಮತ್ತು ಕರ್ನಾಟಕ ರಾಜ್ಯಗಳಿರಡನ್ನು ಮಾತ್ರ ಉಲ್ಲೇಖಿಸಿದ್ದಾರೆ because of the progressive land reforms Scheduled Caste/Scheduled Tribes from 8% to 18 ಅ ಹೋಲ್ಡಿಂಗ್ ಜಾಸ್ತಿಯಾಗಿದೆ, ಆದರೆ ಚಿಕ್ಕ ಹೊಲ್ಡಿಂಗ್. ಅನಾಲಿಸಿಸನಲ್ಲಿ ಏನು ಹೇಳುತ್ತಾರೆಂದರೆ ಇವತ್ತು ಈಗ ನಾವು ಈ ಭೂ ಸುಧಾರಣಾ ಕಾಯ್ದೆಯನ್ನು ತರುವಾಗ ಯಾವುದೋ ಬಡವರ ಜಮೀನಿನ ಮೇಲೆ ಕಣ್ಣಿಟ್ಟಲ್ಲ ಹೇಳುತ್ತಿರುವುದು. ನಿಜವಾಗಿ ನೀವು ನಿರುದ್ಯೋಗವನ್ನು ಕೃಷಿಯಷ್ಟೆ ತೀವ್ರವಾಗಿ ಗಮನಿಸದೆ ಹೋದರೆ, ಉದ್ಯೋಗವನ್ನು ಸೃಷ್ಟಿ ಮಾಡದಿದ್ದರೆ ಯಾವುದೇ ಒಂದು ಭಾಗದಲ್ಲಿ ಅಸಮಾಧಾನಕ್ಕೆ ಎಡೆಮಾಡಿಕೊಡುತ್ತದೆ. ಅದು ಕೃಷಿರಂಗವೇ ಇರಬಹುದು, ಕೈಗಾರಿಕಾ ರಂಗವೇ ಇರಬಹುದು, ಗ್ರಾಮಾಂತರ ಪ್ರದೇಶದಲ್ಲಿರಬಹುದು, ಈ ಪಿಪಲ್ಸ ವಾರ್ ಗ್ರೂಪ್ಸ್ ಆಗಲಿ, ಈಗಿರುವ ಭಯೋತ್ಪಾದಕರಾಗಲಿ, ಅವರೇನು ಈ ಪಟ್ಟಣಗಳಲ್ಲಿ ಹುಟ್ಟಿದವರಲ್ಲ. ಆದುದರಿಂದ ಬಹುಶಃ ಆ ರೀತಿ ಆಗದಂತೆ, ಒಂದು ಕಡೆ ನಾವು ಭೂ ಹೋಲ್ಡಿಂಗನ್ನು ನೋಡಿಕೊಳ್ಳಬೇಕು, ಬಡವರನ್ನೂ ರಕ್ಷಣೆ ಮಾಡಬೇಕು ಅದೇ ರೀತಿಯಾಗಿ ಕೈಗಾರಿಕಾಭಿವೃದ್ಧಿ ಕಡೆಗೂ ಗಮನ ಕೊಡಬೇಕು. ಅದಿಲ್ಲದೆ, ನೀವು ಯಾವುದೇ ಒಂದನ್ನು ಮಾತ್ರ ನೀವು ಗಮನದಲ್ಲಿಟ್ಟುಕೊಂಡರೆ You will not achieve what you want to achieve. ಆದುದರಿಂದ ಪಶ್ಚಿಮ ಬಂಗಾಳದಲ್ಲೂ ಹಾಗೆ ಮಾಡಿದ್ದಾರೆ, Actually Maharashtra started from ಭೂ ಸುಧಾರಣೆಯನ್ನು ಮುರಾರ್ಜಿಯವರ ಕಾಲದಿಂದ ಕಠೋರವಾಗಿ ಅಥವಾ ಬಿಗಿಯಾಗಿ ಶುರು ಮಾಡಿದಷ್ಟು ಇನ್ನಾರು ಮಾಡಲಿಲ್ಲ. ಅದನ್ನೆ ನಾವು ದೇವರಾಜ್ ಅರಸುರವರ ಕಾಲದಲ್ಲಿ, ಮಾಡಿದ್ದೇವೆ, ಈಗ we have to inevitably look back. ಇದರಲ್ಲಿ

ಯಾರದು ಪ್ರೊಗ್ರೇಸಿವ್, ಯಾರದು retrogressive ಎನ್ನುವುದಲ್ಲ. ಇವತ್ತಿನ ಹಳ್ಳಿಗಾಡಿನ ಹುಡುಗರ ದೃಷ್ಟಿಯಿಂದ ಆಗಲಿ ಅಥವಾ ಹೊಲ್ಡಿಂಗ್, ಸಾಮಾನ್ಯವಾಗಿ ಬಡಜನ ಯಾರಿರುತ್ತಾರೆ ಇವರ ದೃಷ್ಟಿಯಿಂದ ಅವರನ್ನೇನು ಗೂಳಿ ಒಡೆಸಬೇಕೆಂದಲ್ಲ, to attack capital investment either from multi-nationals or from any country to create jobs. ನೀವು ಉದ್ಯೋಗವನ್ನು ಸೃಷ್ಟಿಸದೆ ಹೋದರೆ economy - you will never be able to get over the unemployment problem. ಸಮ್ಯನೆ ಬಡತನ ನಿರ್ಮೂಲನೆ, ಬಡತವನ್ನು ತೊಲಗಿಸುತ್ತೇವೆಂದು ಹೇಳುವುದಿಲ್ಲ, ಮಾನ್ಯ ಅಧ್ಯಕ್ಷರೇ, it is all becomes a very abstract slogan. In the interest of job creation, this amendment is ncessary. That is all. Not that we are less interested in protecting the farmers.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಮಾನ್ಯ ಪಟೇಲರು ಹೇಳಿದಂತೆ ಇವರಿಗೆ ಕಡಿಮೆ ಕಾಳಜಿ ಇದೆ ಎಂದು ನಾನು ಖಂಡಿತಾ ಹೇಳುತ್ತಿಲ್ಲ. ಅವರಿಗೆ ಕಾಳಜಿ ಇದೆ, ಆದರೆ ಕಾಳಜಿಗಳ ಸ್ವರೂಪ ಬೇರೆ ಇದೆ. ಕಾಳಜಿ ಇಲ್ಲವೆಂದು ನಾನು ಹೇಳುತ್ತಿಲ್ಲ. ಪಶ್ಚಿಮ ಬಂಗಾಳದಲ್ಲಿ ಈ ರೀತಿ ಭೂ ಸುಧಾರಣಾ ಕಾಯ್ದಿಗೆ ತಿದ್ದುಪಡಿ ತಂದು ನೀವು ಮಾಡಿದ್ದೀರೆಂದು ಹೇಳುತ್ತಿದ್ದೀರಿ. ದಯವಿಟ್ಟು ಅದನ್ನು ಅವರು (ಜೆ.ಹೆಚ್. ಪಟೇಲ್) ಸ್ಪಷ್ಟಪಡಿಸಬೇಕು. ಇವತ್ತು ನಾವು ಭೂ ಸುಧಾರಣ ಕಾಯ್ದಿಗೆ ತಿದ್ದುಪಡಿ ತಂದಿಲ್ಲ. ನೋಡಿ ಇದು ಸತ್ಯವಲ್ಲ ಸತ್ಯಕ್ಕೆ ದೂರವಾದಂಥ ವಿಷಯ.

SRI J.H. PATEL : I am speaking on the basis of authority.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೌದು, ನಾನು ಅದೇ ರೀತಿಯಲ್ಲಿ ಹೇಳುತ್ತಿದ್ದೇನೆ, ಪಶ್ಚಿಮ ಬಂಗಾಳದಲ್ಲಿ ಭೂಮಿಯನ್ನು ವಿದೇಶಿ ಕಂಪನಿಗಳಿಗೆ ಮಾರಾಟ ಮಾಡುವುದಕ್ಕೆ ಭೂಸುಧಾರಣಾ ಕಾಯ್ದೆಯನ್ನು ತಂದಿಲ್ಲ, ಅದರ ಜೊತೆಗೆ ಇವತ್ತು ಪಶ್ಚಿಮ ಬಂಗಾಳದ ಭೂ ಸಂಬಧಗಳನ್ನು ದಾಖಲೆಗಳ ಸಮೇತ ನೀವು ಪರಿಶೀಲನೆ ಮಾಡಿ ನೋಡಿ...

ಶ್ರೀ ಜೆ.ಹೆಚ್. ಪಟೇಲ್ : ನಾನು ಹೇಳಿದ್ದು, ``Earth belongs to poor" ಎನ್ನುವ ಶೀರ್ಷಿಕೆಯಲ್ಲಿರುವ ಭಾರತ ಸರ್ಕಾರದವರ ಅಂಕಿಅಂಶಗಳನ್ನು. ಪಶ್ಚಿಮ ಬಂಗಾಳ ಹಾಗೂ ಕರ್ನಾಟಕದಲ್ಲಿ ಭೂ ಸುಧಾರಣೆಯನ್ನು ಬಹಳ ಪ್ರಗತಿಪರವಾಗಿ ತಂದಿದ್ದಾವೆಂದು ಅವರೇ ಉಲ್ಲೇಖಿಸಿದ್ದಾರೆಂದು ಈ ಭೂ ಸುಧಾರಣಾ ಕಾಯ್ದೆಯ ತಿದ್ದುಪಡಿಯನ್ನು ತಂದ ಹಿನ್ನೆಲೆಯಲ್ಲಿ ನಾನು ಅದನ್ನು ಹೇಳಿದ್ದುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ಸತ್ಯ. ಭೂ ಸುಧಾರಣಾ ಕಾನೂನುನನ್ನು ಪಶ್ಚಿಮ ಬಂಗಾಳ, ಮೊದಲಿಗೆ ಪ್ರಗತಿಪರವಾಗಿ ತಂದಿದೆ ಎನ್ನುವುದು ನಿಜ. ಆದರೆ ಆ ಭೂಸುಧಾರಣಾ ಕಾಯ್ದೆಯನ್ನು ಅವರು ಬಡವರಿಗೆ ಭೂಮಿಯನ್ನು ಕೊಡುವುದಕ್ಕೆ ತಂದದ್ದು, ಈ ಭೂಸುಧಾರಣಾ ಕಾಯ್ದೆಯಲ್ಲಿ ನೀವು ತಿದ್ದುಪಡಿಯನ್ನು ತರುತ್ತಿರತಕ್ಕಂಹದ್ದು ಬಡವರ ಭೂಮಿಯನ್ನು ಬಂಡವಾಳಗಾರರಿಗೆ ಕೊಡುವುದಕ್ಕೆ.

ಶ್ರೀ ಆರ್. ಎಲ್. ಜಾಲಪ್ಪ : ಬಂಡವಾಳಗಾರರು ತೆಗೆದುಕೊಳ್ಳುತ್ತಾರೆಂದು ಹೇಳುತ್ತಿದ್ದಾರೆ, ಕೊಡದೇ ಇದ್ದರೆ ಇವರು ಹೇಗೆ ತೆಗೆದುಕೊಳ್ಳುತ್ತಾರೆ?

ಅಧ್ಯಕ್ಷರು : ಮುಂಚಿಯ ಭೂ ಸುಧಾರಣಾ ಕಾಯ್ದೆಯಲ್ಲಿ ಟಿಲ್ಲರೆ ಯಾರಿದ್ದಾರೆ ಕಡ್ಡಾಯವಾಗಿ ಅವನಿಗೆ ಒಡೆತನವನ್ನು ಕನಫರಂ ಮಾಡಬೇಕೆಂದು ಮಾಡಿದರು. ಇಲ್ಲಿ ಈ ತಿದ್ದುಪಡಿಯಲ್ಲಿ ಇವರೆಲ್ಲಾ ಕಡ್ಡಾಯವಾಗಿ ಮಾಡಬೇಕೆಂದು ಮಾಡಿದ್ದಾರೋ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ, ಇಲ್ಲ.

MR. SPEAKER : Whoever wants to sell will sell. Whoever wants to own, he continues, to own the land. Why do you compare with that of this.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದು ನಿಮ್ಮ ಅಭಿಪ್ರಾಯವಿರಬಹುದು. ಪ್ರಶ್ನೆ ಇರತಕ್ಕಂತಹದ್ದು ಹಾಗಲ್ಲ, ನೀವು ಉಳುವವನಿಗೆ, ಸಣ್ಣ ರೈತನಿಗೆ, ಬಡ ರೈತನಿಗೆ ಉಳುವುದಕ್ಕೆ ಭೂಮಿಯನ್ನು ಕೊಟ್ಟು, ಈಗ ಅವನು ವ್ಯವಸಾಯ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ, ಪಾಪರ್ ಆಗುತ್ತಿದ್ದಾನೆ, ಆ ಭೂಮಿಯನ್ನು ಇಟ್ಟುಕೊಂಡು ಅವನಿಗೆ ಬದುಕುವುದಕ್ಕೆ ಸಾಧ್ಯವಾಗುತ್ತಿಲ್ಲ, ಅದನ್ನು ಮಾರಾಟ ಮಾಡಿದರೆ ಸ್ವಲ್ಪ ಹಣ ಬರುತ್ತದೆ. ಕಾರ್ಖಾನೆಗೆ ಭೂಮಿ ಸಿಗುತ್ತದೆಂದು ಹೇಳುತ್ತಿರುವ ವಾದ ಇದು. ಆದರೆ, ಇವತ್ತು ಒಂದನ್ನು ನಾವು ತಿಳಿಯಬೇಕು. ಅದೇನೆಂದರೆ, ಸಣ್ಣ ರೈತ, ಮಧ್ಯಮ ರೈತ, ಬಡ ರೈತ ವ್ಯವಸಾಯದಲ್ಲಿ ಎತಕ್ಕೆ ನಷ್ಟ ಅನುಭವಿಸುತ್ತಿದ್ದಾನೆ? ಅದಕ್ಕೆ ಮಾತ್ರ ಕಾರಣವನ್ನು ಹುಡುಕದೆ, ಅವನಿಗೆ ಎರಡು ಎಕರೆಯ ಭೂಮಿಯಲ್ಲಿ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು, ಹಾಗಾದರೆ ಇವತ್ತು ಆಕ್ರಮವನ್ನು ಸಕ್ರಮ ಮಾಡುವ ಕಾಯ್ದೆಯಲ್ಲಿ ಏನು ತಿದ್ದುಪಡಿಯನ್ನು ತಂದಿದೀರಿ, ಅದರಲ್ಲಿ ನೂರಾರು ಎಕರೆ ಭೂಮಿಯನ್ನು ಕೊಡಬೇಕೆಂದು ಮಾಡಿದ್ದೀರೋ? ಎರಡು ಎಕರೆ, ಮೂರು ಎಕರೆ, ಒಂದು ಎಕರೆ, ಅರ್ಧ ಎಕರೆ ಜಮೀನನ್ನೂ ಕೂಡ ತರಬೇಕೆಂದು ನಿಮ್ಮ ಆಕ್ರಮ ಸಕ್ರಮ ಕಾನೂನಿನಲ್ಲಿದೆ. ಹಾಗಾದರೆ ಅದನ್ನು ನೀವು ಹೇಗೆ ಒಪ್ಪುತ್ತೀರಿ? ಒಂದು ಎಕರೆ, ಎರಡು ಎಕರೆ, ಭೂಮಿಯನ್ನು ಇಟ್ಟುಕೊಂಡು ಒಬ್ಬ ರೈತ ಜೀವನ ಮಾಡುವುದಕ್ಕಾಗುವುದಿಲ್ಲವೆನ್ನುವ ಕಾರಣಕೋಸ್ಕರ ಅದನ್ನು ಮಾರಾಟ ಮಾಡಿಬಿಟ್ಟರೆ ಹಣ ಬರುತ್ತದೆ, ಅದನ್ನು ಅವನು ಜೇಬಿನಲ್ಲಿಟ್ಟುಕೊಂಡು ಪಟ್ಟಣಕ್ಕೆ ಬಂದುಬಿಡುತ್ತಾನೆ ಎಂದು ಒಂದೇ ದೃಷ್ಟಿಯಲ್ಲಿ ಆಲೋಚನೆ ಮಾಡುತ್ತಿರತಕ್ಕಂತಹವರು ನೀವು. ನೀವು ಒಂದು ದೃಷ್ಟಿಯಲ್ಲಿ ಆಲೋಚನೆ ಮಾಡುತ್ತಿರುವುದು, ನಾನಲ್ಲ ಒಂದು ದೃಷ್ಟಿಯಿಂದ ಆಲೋಚನೆ ಮಾಡುತ್ತಿರುವುದು. ನಾನು ಎರಡು ದೃಷ್ಟಿಯಿಂದಲೂ ಆಲೋಚನೆ ಮಾಡುತ್ತಿದ್ದೇನೆ. ಈ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿ ತರುವಂತಹ ಸಂದರ್ಭದಲ್ಲಿ ಪಟ್ಟಣಗಳ ಪರಿಸ್ಥಿತಿಯನ್ನೂ ಆಲೋಚನೆ ಮಾಡಬೇಕು ಹಾಗೂ ಹಳ್ಳಿಗಳ ಪರಿಸ್ಥಿತಿಯನ್ನೂ ಆಲೋಚನೆ ಮಾಡಬೇಕಾಗುತ್ತದೆ. ಅದಕ್ಕಿಂತ ಮುಖ್ಯವಾದಂತಹ ಅಂಶವೆಂದರೆ, political economy is involved in this aspect. That is giving way to infiltrate capitalistic agricultures in India. ಅದರ ಮೂಲ ಉದ್ದೇಶವಿರತಕ್ಕಂತಹದ್ದು, That is the political economy behind this land reforms amendment. ಅದಕ್ಕೆ ನಾವು ಈ ಸಂದರ್ಭದಲ್ಲಿ ವಿರೋಧ ಮಾಡುತ್ತಿದ್ದೇವೆ...

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಎರಡನ್ನು ಮಿಶ್ರಣ ಮಾಡುತ್ತಾರೆ. ನಾನು ಹೇಳುತ್ತಿರುವುದು ಕೃಷಿ ಯೋಗ್ಯವಾದಂತಹ, ಕೃಷಿಯ ಮೇಲೆಯೇ

ಅವಲಂಬಿಸಿರತಕ್ಕಂತಹ, agriculture as a part of economy ಅದು ಬೇರೆ, ಇಲ್ಲಿ ಇವರು ತಂದಿರುವ ತಿದ್ದುಪಡಿ ಏತಕ್ಕೋಸ್ಕರವೆಂದರೆ, ಇಂಡಸ್ಟ್ರಿ ಎಂದರೆ ಅದರಲ್ಲಿ ಈ ಫ್ಲಾರಿಕಲ್ಚರೂ ಬಂತು, ಫುಡ್ ಕಲ್ಚರೂ ಬಂತು. ಈ ತರಹ ನಾವು ಹೊಸ ವ್ಯಾಖ್ಯಾಯನವನ್ನು ಕೊಟ್ಟು ಉದ್ಯೋಗವನ್ನು ಸೃಷಿಸದೇ ಹೋದರೆ, ಬಂಡವಾಳಕ್ಕೆ ಅವಕಾಶ ಮಾಡಿ ಕೊಡದೇ ಹೋದರೆ, ಹಳ್ಳಿಗಳಲ್ಲಿರುವ ಈ ಜಮೀನೇನು ವಿಸ್ತರಣೆಯಾಗುವುದಿಲ್ಲ, ಜನಸಂಖ್ಯೆ ಜಾಸ್ತಿಯಾಗುತ್ತಿದೆ. this exodus from the village to the cities ಕಾಣುತ್ತಿದ್ದೇವೆ. ಅವರಿಗೆ ನೀವೇನಾದರೂ ಕೆಲಸ ಕೊಡದಿದ್ದರೆ they become a problem to the society and the Government. ಅದು ಆಗಬಾರದೆಂದು ಈ ಭೂ ಸುಧಾರಣಾ ಕಾಯ್ದೆಯನ್ನು ತಂದಿರುವುದು. ಭೂ ಸುಧಾರಣಾ ಕಾಯ್ದೆಗೆ ಈ ತಿದ್ದುಪಡಿಯನ್ನು ತಂದಿರುವುದು ಕೇವಲ ಕೃಷಿಗೆ ಸಂಬಂಧಿಸಿದಂತೆ ಅಲ್ಲ, ಒಟ್ಟು ಆರ್ಥಿಕತೆಯ ಹಿತಾಸಕ್ತಿಯಿಂದ. ಆದುದರಿಂದ ನಾವು ಇಷ್ಟನ್ನು ಅವಕಾಶ ಮಾಡಿ ಕೊಡದಿದ್ದರೆ ಇನ್ನು, ಇದನ್ನು ಬಿಟ್ಟು ಬೇರೆ ಏನು ಮಾಡಬೇಕು? ಜಮೀನನ್ನು ವಿಸ್ತರಿಸುವುದಕ್ಕಾಗುತ್ತದೆಯೇ?

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಜಮೀನಿನ ಬಗ್ಗೆ ನೀವು ಹೇಳಿರುವ ಸತ್ಯವನ್ನು ನಾನು ಒಪ್ಪುತ್ತೇನೆ. ಜಮೀನನ್ನು ಕಾರ್ಖಾನೆಗಳಲ್ಲಿ ವಸ್ತುಗಳನ್ನು ತಯಾರು ಮಾಡಿದಂತೆ ತಯಾರು ಮಾಡುವುದಕ್ಕಾಗುವುದಿಲ್ಲ ಹಾಗೂ ಅದನ್ನು ವಿಸ್ತರಿಸುವುದಕ್ಕಾಗುವುದಿಲ್ಲ. ಆದರೆ ಭೂಮಿ ಎನ್ನತಕ್ಕಂಥದ್ದು ಇಡೀ ದೇಶದ ಆರ್ಥಿಕ ವ್ಯವಸ್ಥೆಗೆ ಮೂಲಾಧಾರವಾಗಿರತಕ್ಕಂತಹದ್ದು. ನೀವು ಕೃಷಿ ಉತ್ಪಾದನೆಯನ್ನು ಹೆಚ್ಚು ಮಾಡದೆ ಹೋದರೆ, ಈಗ ಕೈಗಾರಿಕೆಗಳಲ್ಲಿ ಉತ್ಪಾದನೆ ಮಾಡಿದಂತಹ ವಸ್ತುಗಳಿಗೆ ಈ ದೇಶದಲ್ಲಿ ಮಾರುಕಟ್ಟೆ ಸಿಗುವುದಿಲ್ಲ. ಅದನ್ನು ಕೂಡ ನಾವು ತಿಳಿದಿರಬೇಕು. ಆದುದರಿಂದ ನಿರುದ್ಯೋಗ ಸಮಸ್ಯೆ ಬಗೆಹರಿಯುವುದಕ್ಕೆ, ಅಲ್ಲಿ ಭೂಮಿಯನ್ನು ಮಾರಿಕೊಂಡು ಪಟ್ಟಣಕ್ಕೆ ಬಂದವರಿಗೆ ಕಾರ್ಖಾನೆಗಳಲ್ಲಿ ಉದ್ಯೋಗ ಕೊಡುತ್ತೇವೆಂದು ಹೇಳುವ ವಾದ ಏನಿದೆ ಅದು ಸರಿಯಲ್ಲ. ನೀವು ಹೈಲಿ ಇಂಡಿಸ್ಟ್ರೀಯಲ್ ಡೆವಲಪ್ಡ್ ಕಂಟ್ರೀಸ್ ಏನಿದ್ದಾಳೆ ಅಲ್ಲಿ ನಿರುದ್ಯೋಗ ಸಮಸ್ಯೆ ಇನ್ನು ಏತಕ್ಕೆ ಇದೆ ಎನ್ನುವುದನ್ನು ತಾವು ದಯವಿಟ್ಟು ಅಭ್ಯಾಸ ಮಾಡಿ. ಹಾಗಾದರೆ, ಹೈಲಿ ಇಂಡಿಸ್ಟ್ರಿಯಲ್ ಡೆವೆಲಪ್ಡ್ ಕಂಟ್ರೀಸ್‌ನಲ್ಲೆಲ್ಲಾ ಏತಕ್ಕೆ ನಿರುದ್ಯೋಗದ ಸಮಸ್ಯೆ ಇದೆ?

ಅಧ್ಯಕ್ಷರು : ಜಮೀನು ಇರುವವರೆಲ್ಲಾ ಯಾರು ಫುಡಗ್ರೇನ್ಸ ಬೆಳೆಯುತ್ತಿಲ್ಲ ಯಎಕಲಿಪ್ಪಸಗೆ ತಿರುಗಿಕೊಂಡಿದ್ದಾರೆ. ಕೂಲಿಯವರಿಗೆ ಕೂಲಿಯನ್ನು ಕೊಡಬೇಕಾಗುತ್ತದೆ, ಅದಕ್ಕಾದರೆ, ಗೊಬ್ಬರ, ನೀರು ಹಾಕಬೇಕಾಗಿಲ್ಲವೆಂದು ನಮ್ಮಜಿಲ್ಲೆಯಲ್ಲೆಲ್ಲಾ ಯಾರ್ಯಾರು ಜಾಸ್ತಿ ಜಮೀನನ್ನು ಇಟ್ಟುಕೊಂಡಿದ್ದಾರೆ ಆ ರೀತಿ ಅವರೆಲ್ಲಾ ಮಾಡುತ್ತಿರಬಹುದು.

ಕೆಲವರು ಏನೊ ಟ್ರ್ಯಾಕ್ಟರ್ ಇಟ್ಟುಕೊಂಡು ಉಳುಮೆ ಮಾಡುತ್ತಿದ್ದಾರೆ, ಉಳಿದವರೆಲ್ಲಾ ನೀಲಗಿರಿಯನ್ನು ಬೆಳೆಸುತ್ತಿದ್ದಾರೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ಹೌದು, ಹೌದು ಏಕೆಂದರೆ ನೀರಾವರಿ ಇಲ್ಲ ಏನು ಮಾಡುತ್ತಾರೆ? ನೀರಾವರಿ ಇಲ್ಲದೆ ಇರತಕ್ಕಂತಹದ್ದು.....

ಅಧ್ಯಕ್ಷರು : ಅವರು ನೀಲಗಿರಿಯನ್ನು ಬೆಳೆಸುತ್ತಿರುವುದು ನೀರಾವರಿ ಇಲ್ಲವೆಂದಲ್ಲ, ಜಮೀನನ್ನು ಬಿಟ್ಟುಕೊಡಲು ಇಷ್ಟವಿಲ್ಲ, ಕೂಲಿಯವರಿಗೆ ಕೂಲಿಯನ್ನು ಕೊಡುವುದಕ್ಕೂ ಇಷ್ಟವಿಲ್ಲ ಆದುದರಿಂದ ನೀಲಗಿರಿಯನ್ನು ಬೆಳೆಸುತ್ತಿದ್ದಾರೆ. ನೂರಾರು ಎಕರೆ ಜಮೀನಿನಲ್ಲಿ ನೀಲಗಿರಿಯನ್ನು ಬೆಳೆಸುತ್ತಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲ, ಇಲ್ಲ, ಅದು ಸರಿಯಾದಂತಹ ಅಭಿಪ್ರಾಯವಲ್ಲ. ನೀಲಗಿರಿಯನ್ನು ಬೆಳೆಸುವುದಕ್ಕೆ ಪ್ರೋತ್ಸಾಹವನ್ನು ಕೊಡುತ್ತಿರುವುದು ಕೂಡ ನಾವೆ.

ಶ್ರೀ ಕೆ. ಶ್ರೀನಿವಾಸ ಗೌಡ : ಅಧ್ಯಕ್ಷರೆ, ಮಾನ್ಯ ಶ್ರೀರಾಮ ರೆಡ್ಡಿಯವರು ಏನೋ ಹೇಳಿದರು. ಜೈನಾದಲ್ಲಿ ಜೂಹಾ ಎನ್ನುವ ಒಂದು ಪಟ್ಟಣವಿದೆ. ಇವತ್ತು ಈ ಕಮಿನಿಸ್ಟರು ಏನು ಕಮ್ಯೂನಿಸಂ ಅನ್ನು ಹೇಳುತ್ತಾರೆ ನಾನು ಅಲ್ಲಿಗೆ ಸ್ವತಃ ಹೋಗಿ ನೋಡಿದ್ದೇನೆ. 1980ನೇ ಇಸವಿಯಲ್ಲಿ ಅಲ್ಲಿ ಬರಿ 10 ಸಾವಿರ ಜನವಿದ್ದರು ಇವತ್ತು ಅಲ್ಲಿ 10 ಮಿಲಿಯನ್ ಜನವಿದ್ದಾರೆ. ಅಲ್ಲಿ ಎಲ್ಲಾ ಜಮೀನನ್ನು ಕನ್ವರ್ಟಮಾಡಿ ನಾನ್ ರೆಸಿಡೆನ್ಸ್ ಆಫ್ ಜೈನಿಸಗೆ ಕೊಟ್ಟು ಅಭಿವೃದ್ಧಿ ಮಾಡಿದ್ದಾರೆ. ಮಾನ್ಯ ಶ್ರೀರಾಮರೆಡ್ಡಿಯವರು ಇದನ್ನು ಅರ್ಥ ಮಾಡಿಕೊಳ್ಳಬೇಕು, ಅವರೂ ಸಹ ಹೋಗಿ ನೋಡಿದ್ದಾರೆ. ಜೈನಾದಲ್ಲಿ ತಮ್ಮದೇ ಆದ ಒಂದು ಪಕ್ಷದ ವತಿಯಿಂದ ಅನುಸರಿಸುವುದನ್ನು ನೋಡಿ ತಾವು ಸಹ ಹೇಗೆ ನಡೆಯಬೇಕೆನ್ನುವುದನ್ನು ಯೋಚನೆ ಮಾಡಬೇಕು. 1980 ನೇ ಇಸವಿಯಲ್ಲೇ ಹೊರದೇಹದ ಬಂಡವಾಳವನ್ನು ತೊಡಗಿಸಬೇಕೆಂದು ಚೈನಾದಲ್ಲಿ ಮಾಡಿದ್ದಾರೆ. ಅದನ್ನು ನಾವು 1990ನೇ ಇಸವಿಯಲ್ಲಿ ಚಿಂತನೆ ಮಾಡುತ್ತಿದ್ದೇವೆ. ಅದಕೋಸ್ಕರ ಅವರು, ನಿಮ್ಮ ಪಕ್ಷದವರೇ ಆದಂತಹ ಚೈನಾ ದೇಶದವರು ಬಹಳ ಹಿಂದೆಯೇ ಬಹಳ ಲಿಬರಲೈಜ್ ಆಗಿದ್ದಾರೆ. ಬಿಡಿ...

ಅಧ್ಯಕ್ಷರು : ಆಯಿತು, ಡೊಂಟ್ ಇನ್ಸೈಟ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೋಡಿ ಅಧ್ಯಕ್ಷರೆ, ಚೈನಾ ದೇಶದ ವಾದವನ್ನು ಭಾರತದ ದೇಶದಲ್ಲಿ ಮಾಡುತಕ್ಕಂಥ ಮಟ್ಟಕ್ಕೆ ನಾನು ಹೋಗುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು : ಅವರೇನೂ ಇವತ್ತು ಅಪರೂಪಕ್ಕೆ ಕುಳಿತಿದ್ದಾರೆ, ನಾನು ಇಲ್ಲಿ ದಿವಸವೂ ಕುಳಿತಿರಬೇಕಲ್ಲ ರೆಡ್ಡಿಯವರೆ, ಸಾಕಾಗುತ್ತದೆ, ಮುಗಿಸೋಣ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಮುಗಿಸಿ ನೀವು ಮುಗಿಸುವುದಾದರೆ ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ, ಆದರೆ ಈ ಭೂ ಸುಧಾರಣಾ ಕಾಯ್ದೆಗೆ ತಿದ್ದುಪಡಿಯನ್ನು ತರುತ್ತಿರುವುದಕ್ಕೆ ನನ್ನ ಸಂಪೂರ್ಣವಾದ ವಿರೋಧವಿದೆ, ನಾನು ಆದನ್ನು ಪ್ರತಿಭಟನೆ ಮಾಡಿ, ನಾನು ಸಭಾತ್ಯಾಗವನ್ನು ಮಾಡುತ್ತಿದ್ದೇನೆ.

(ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಭಾ ತ್ಯಾಗ ಮಾಡಿದರು)

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ

" 1995ರ ಕರ್ನಾಟಕ ಭೂಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

"ಪ್ರಸ್ತಾವ ಅಂಗೀಕರಿಸಲ್ಪಟ್ಟಿತು"

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2 ರಿಂದ 8ವರೆಗೆ

ಅಧ್ಯಕ್ಷರು : "ಖಂಡ 2 ರಿಂದ 8ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 8 ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವನೆ ಅಂಗೀಕಾರ

ಶ್ರೀ ಆರ್. ಎಲ್. ಜಾಲಪ್ಪ (ಮಾನ್ಯ ಕಂದಾಯ ಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, 1995ರ, ಕರ್ನಾಟಕ ಭೂ ಸುಧಾರಣೆ(ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1995ರ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

4 ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, 1955.

ಪರ್ಯಾಲೋಚನಾ ಪ್ರಸ್ತಾವ

ಶ್ರೀ ವೈಜನಾಥಪಾಟೀಲ್ (ನಗರಾಭಿವೃದ್ಧಿ, ಕಾಡಾ, ಹೈದರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೇ, 1995ರ ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,